International Journal of Kannada Research
www.kannadajournal.com

ISSN: 2454–5813
IJKR 2021; 7(4): 95-101
© 2021 IJKR
www.kannadajournal.com
Received: 12-08-2021
Accepted: 15-09-2021

**ಮುಸ್ತಫಾ ಕೆ.ಎಚ್**
ಸಂಶೋಧನಾ ವಿದ್ಯಾರ್ಥಿ, ಖಗಿಕ ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು, ಕರ್ನಾಟಕ, ಭಾರತ

Corresponding Author:
**ಮುಸ್ತಫಾ ಕೆ.ಎಚ್**
ಸಂಶೋಧನಾ ವಿದ್ಯಾರ್ಥಿ, ಖಗಿಕ ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು, ಕರ್ನಾಟಕ, ಭಾರತ

# ಕಿ. ರಂ. ನಾಗರಾಜ ಅವರ ಸಂಸ್ಕೃತಿ ವಿಮರ್ಶೆಯ ಮಾದರಿ

**ಮುಸ್ತಫಾ ಕೆ.ಎಚ್**

ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗಳು ಹೇಗೆ ಒಂದಕ್ಕೊಂದು ಪೂರಕವಾಗಿ ಒಡಮೂಡಿದೆ ಎಂಬುದನ್ನು ಗ್ರಹಿಸುವ ಬಗೆಯಾಗಿದೆ. ಸಾಹಿತ್ಯ ಪಠ್ಯ ಮತ್ತು ಸಂಸ್ಕೃತಿಯನ್ನು ಚಿಂತನೆಯಾಗಿ ಪರಿಗಣಿಸುವ ಬಗೆಯನ್ನು ಈ ಭಾಗ ಮುಂದಿಡುತ್ತದೆ. ಡಾ. ಎಂ ಎಸ್ ಆಶಾದೇವಿ ಅವರು ಕಿ. ರಂ. ನಾಗರಾಜ ಅವರನ್ನು ಸಂದರ್ಶಿಸುತ್ತಾರೆ. ಸಂದರ್ಶನದ ಮೊದಲ ಪ್ರಶ್ನೆಯು ಕಿ. ರಂ. ನಾಗರಾಜ ಅವರ ಅಭಿರುಚಿ ಯಾವ ವಿಮರ್ಶೆಯನ್ನು ಕೇಂದ್ರಿಕರಿಸಿದೆ ಎಂಬುದಾಗಿತ್ತು. ಜೊತೆಗೆ ಆಯ್ಕೆಯನ್ನೂ ಒಳಗೊಂಡಂತೆ ರಸಾಸ್ವಾದಿ ವಿಮರ್ಶೆ ಮತ್ತು ಸಂಸ್ಕೃತಿ ವಿಮರ್ಶೆಯನ್ನು ಮುಂದಿಡಲಾಗಿತ್ತು. 50ರ ದಶಕದ ರಸಾಸ್ವಾದಿ ವಿಮರ್ಶೆಯಿಂದ ಐರೋಪ್ಯ ವಿಮರ್ಶೆಯ ಪ್ರಸ್ಥಾನಗಳನ್ನು ಉಲ್ಲೇಖಿಸುತ್ತಲೇ ಹೇಗೆ ನಮ್ಮ ಪರಂಪರೆಯೊಳಗೆ ಸಂಸ್ಕೃತಿ ವಿಮರ್ಶೆ ಎಂಬುದು ಅಂತಸ್ಥವಾಗಿದೆ ಎಂಬುದನ್ನು ಅವರು ವಿವರಿಸುತ್ತಾರೆ. “ಸಂಸ್ಕೃತಿ ವಿಮರ್ಶೆಯೂ ಈ ನಮ್ಮ ಕಾಲಘಟ್ಟದಲ್ಲಿಯೇ ರೂಪಿತವಾದದ್ದು ಎಂದೂ ನಾವು ತಿಳಿಯಬಾರದು. ಸಂಸ್ಕೃತಿ ವಿಮರ್ಶೆ ಅನ್ನೋದು 20ನೇ ಶತಮಾನದ ಡಿಸಿಪ್ಲೀನ್ ಇರಬಹುದು. ಆದರೆ ಅದಕ್ಕೆ ಸಾವಿರ ವರ್ಷಗಳ ಇತಿಹಾಸ ಇದೆ. ಹಾಗೆ ನೋಡಿದರೆ ಎಲ್ಲ ವಿಮರ್ಶೆಯ ವಿವೇಕವೂ ಸಂಸ್ಕೃತಿ ವಿಮರ್ಶೆಯೇ ಅಲ್ಲವೆ?” (ಪ್ರದೀಪ್ ಮಾಲ್ಗುಡಿ (ಸಂ), 2011, ಪುಟ–48) ಎಂಬ ಮರು ಪ್ರಶ್ನೆಯನ್ನು ಕಿ. ರಂ. ನಾಗರಾಜ ಅವರು ಮುಂಡಿಡುತ್ತಾರೆ. ಮುಳಿಯ ತಿಮ್ಮಪ್ಪಯ್ಯನವರ ಆದಿಯಾಗಿ ನಮ್ಮ ನಡುವೆ ಇರುವ ವಿಮರ್ಶಕರಾದ ರಾಜೇಂದ್ರ ಚೆನ್ನಿಯವರನ್ನೂ ಒಳಗೊಂಡ ಹೊಸ ತಲೆಮಾರಿನವರನ್ನೂ ಕಿ. ರಂ. ನಾಗರಾಜ ಅವರು ಸಂಸ್ಕೃತಿ ವಿಮರ್ಶಕರಾಗಿ ಗುರುತಿಸಿಕೊಳ್ಳುವ ಕಾರ್ಯವನ್ನು ಮಾಡಿದ್ದಾರೆ. ಇದಕ್ಕೆ ಕಾರಣ ಅವರು ಪರಿಭಾವಿಸಿಕೊಂಡಿದ್ದ ಸಮುದಾಯದೊಳಗಿನ ಜೀವದ್ರವ್ಯವೇ ಆಗಿದೆ. “ಸಮುದಾಯದ ಎಲ್ಲಾ ಜೀವದ್ರವ್ಯಗಳೂ ಸಂಸ್ಕೃತಿ ವಿಮರ್ಶೆಯನ್ನು ರೂಪಿಸುತ್ತಿರುತ್ತವೆ. ಪಂಪನನ್ನೋ, ರಾಘವಾಂಕನನ್ನೋ, ಲಕ್ಷ್ಮೀಶನನ್ನೋ ಒಂದು ಪೀಳಿಗೆ ಗ್ರಹಿಸಿ, ಅನುಭವಿಸಿ ಇನ್ನೊಂದು ಪೀಳಿಗೆಗೆ ಕಳುಹಿಸುತ್ತಿರುತ್ತದೆ. ಅಂದರೆ ಕಾಲದ ಅಂತರದಲ್ಲಿ ಕೃತಿಯೊಂದು ಒಳಗಾಗುವ ಓದಿನ ಪ್ರಕ್ರಿಯೆಯೇ ಮೂಲತಃ ಸಂಸ್ಕೃತಿ ವಿಮರ್ಶೆ.” (ಪ್ರದೀಪ್ ಮಾಲ್ಗುಡಿ (ಸಂ), 2011, ಪುಟ–48) ಎಂಬ ವ್ಯಾಖ್ಯಾನವನ್ನು ಕಿ. ರಂ. ನಾಗರಾಜ ಅವರು ಮುಂದಿಟ್ಟಿದ್ದಾರೆ. ಇದು ಸಂಸ್ಕೃತಿ ವಿಮರ್ಶೆಯ ವಿಸ್ತಾರವಾದ ನೆಲೆಯಾಗಿದ್ದು ವಿಭಿನ್ನ ಅಭಿರುಚಿಗಳನ್ನು ರೂಪಿಸುತ್ತಲೆ ನಿರಂತರತೆಯನ್ನು ಸಾಧಿಸುವ ಪ್ರಯತ್ನವನ್ನು ಮಾಡುತ್ತದೆ.

ಸಂಸ್ಕೃತಿ ವಿಮರ್ಶೆಯನ್ನು ಅರ್ಥಮಾಡಿಕೊಳ್ಳಬೇಕಾದರೆ ನಮ್ಮ ಸಾಹಿತ್ಯ ಚರಿತ್ರೆ ಮತ್ತು ವಿಮರ್ಶಾ ಬರಹಗಳಿದ್ದರೆ ಸಾಲದು. ಮೂಲ ಪಠ್ಯಗಳನ್ನು ಓದಿನ ಮಾದರಿಗೆ ಒಗ್ಗಿಸುವ ವಿಮರ್ಶಾತ್ಮಕ ಕೌಶಲ್ಯ ಇರಬೇಕು. ಅಲ್ಲದೆ ಅಂತರ್ ಶಿಸ್ತಿನ ಪಠ್ಯಗಳನ್ನು ಅನುಸಂಧಾನಾತ್ಮಕ ಗ್ರಹಿಸಿಕೊಳ್ಳುವ ಸಾಮರ್ಥ್ಯವು ಒರ್ವ ಸಂಸ್ಕೃತಿ ವಿಮರ್ಶಕನಿಗೆ ಅಗತ್ಯ. ಅಲ್ಲದೆ ಬಹುತ್ವದ ಆಯಾಮಗಳು ಸಂಸ್ಕೃತಿ ವಿಮರ್ಶೆಯನ್ನು ವಿಸ್ತರಿಸುವ; ವಿಶ್ವಾತ್ಮಕವಾಗಿ ಯೋಚಿಸುವ ಸಾಮರ್ಥ್ಯವು ಸಂಸ್ಕೃತಿ ವಿಮರ್ಶಕನಿಗಿರಬೇಕು. ಹೊಸ ದಾರಿಯ ಪರಿಕ್ರಮದ ಮೂಲಕವೇ ಸಂಸ್ಕೃತಿ ವಿಮರ್ಶೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯ.

ಕನ್ನಡದಲ್ಲಿ ನವ್ಯದ ಅನುಭವನಿಷ್ಠ ವಿಮರ್ಶೆಯ ಮುಂದಿನ ಹಂತದಲ್ಲಿ ಸಂಸ್ಕೃತಿ ವಿಮರ್ಶೆಯು ಬೆಳೆಯಿತು. ನಮ್ಮ ಸಂಸ್ಕೃತಿನಿಷ್ಠ ವಿಮರ್ಶೆಯ ಯಶಸ್ವಿ ಮಾದರಿಗಳಾಗಿ ಕಾಣಿಸುವ ಯು.ಆರ್.ಅನಂತಮೂರ್ತಿ, ಡಿ.ಆರ್. ನಾಗರಾಜ, ದೇವನೂರ ಮಹದೇವ, ಕಿ.ರಂ ನಾಗರಾಜ ಮೊದಲಾದವರ ವಿಮರ್ಶಾ ಬರಹಗಳಲ್ಲಿ ಯಶಸ್ವಿ ರೂಪಕಗಳ ಬಳಕೆಯನ್ನು ಕಾಣುತ್ತೇವೆ. ಇದು ಲೋಕವನ್ನು ಅವರು ಒಳಗೊಳ್ಳುವ ಕ್ರಮ. ಅದಕ್ಕೆ ಪೂರಕವಾಗಿ ಅವರು ಲೇಖಕರ ಪಠ್ಯದ ಯಶಸ್ವಿ ಬಳಕೆಯನ್ನು ಮಾಡುತ್ತಾರೆ.

ಹಾಗೆ ಆಗದಿರುವಲ್ಲಿ ವಿಮರ್ಶೆಯ ಲೋಪಗಳು ಸ್ಪಷ್ಟವಾಗಿ ಗೋಚರಿಸುತ್ತವೆ.

ಸಂಸ್ಕೃತಿ ವಿಮರ್ಶೆಯನ್ನು ಎರಡು ಸ್ವರೂಪದಲ್ಲಿ ಗಮನಿಸಬಹುದು. ಒಂದು ಅಕೆಡೆಮಿಕ್ ವಿನ್ಯಾಸ. ಮತ್ತೊಂದು ಜನಧ್ವನಿಯ ಅಥವಾ ಜನಸಮುದಾಯದ ಹಿನ್ನೆಲೆಯಲ್ಲಿ. ಸಂಸ್ಕೃತಿ ವಿಮರ್ಶೆಯ ಮಾದರಿಗಳು ಸಾಹಿತ್ಯ ವಿಮರ್ಶೆಗಿಂತಲೂ ಭಿನ್ನ ಸ್ವರೂಪದ್ದು. ಕನ್ನಡದ ಮಟ್ಟಿಗೆ ಸಂಸ್ಕೃತಿ ವಿಮರ್ಶೆಯ ಚರ್ಚೆಯು ಬಂಡಾಯ ಸಾಹಿತ್ಯದ ಅನಂತರದ ಪ್ರತಿಕ್ರಿಯೆಯಾಗಿ ನಿರೂಪಣೆಗೊಂಡಿರುವುದನ್ನು ಕಾಣಬಹುದು. ಸಂಸ್ಕೃತಿಯ ಕುರಿತ ಅಧ್ಯಯನಗಳು ಕನ್ನಡ ಸಾಹಿತ್ಯದಲ್ಲಿ ಅಂದರೆ ಈ ಮೊದಲೆ ಮಿಷನರಿ ಮತ್ತು ಅನಂತರದ ಸಾಹಿತ್ಯ ಅಧ್ಯಯನಗಳು ನಿರ್ವಹಿಸುತ್ತಾ ಬಂದಿರುವುದನ್ನು ಹಲವಾರು ಉದಾಹರಣೆಯ ಮೂಲಕ ಗ್ರಹಿಸಬಹುದು. ನವೋದಯ ವಿಮರ್ಶೆಯ ಒಳಗೆಯೂ ಸಂಸ್ಕೃತಿಯ ರೂವಾರಿತನ ಮತ್ತು ಸಂಸ್ಕೃತಿಯ ಬೇರನ್ನು ವೇದ ಶಾಸ್ತ್ರ ಪುರಾಣ ಕಥನಗಳಲ್ಲಿ ಕಂಡುಕೊಳ್ಳುವ ವೈದಿಕಶಾಹಿ ಹಾಗೂ ಕಾಲದ ತುರ್ತಿನ ಅನಿವಾರ್ಯ ನಿರ್ವಹಣೆಯು ಹೆಚ್ಚಾಗಿ ಕಂಡುಬಂದಿದ್ದನ್ನು ಗುರುತಿಸಬಹುದು. ನವೋದಯ ಕಾಲದವು ಸಂಸ್ಕೃತಿಯನ್ನು ವಿಮರ್ಶಿಸಿದ್ದಕ್ಕಿಂತಲೂ ಡಾಳವಾಗಿ ಸಂಸ್ಕೃತಿಯನ್ನು ಜೀವನಶೈಲಿಯಾಗಿ, ಉನ್ನತೀಕರಿಸಲ್ಪಟ್ಟ ಶ್ರೇಷ್ಠತೆಯ ಕ್ರಿಯಾವಿಧಿಯಾಗಿ ಅರ್ಥೈಸಿಕೊಂಡಿತು.

ನವೋದಯ ಕಾಲಘಟ್ಟದಲ್ಲಿ ಸಾಹಿತ್ಯ ಮತ್ತು ವಿಮರ್ಶೆಗೆ ಪಾಶ್ಚಮಾತ್ಯ ಸಾಹಿತ್ಯ ತತ್ವಗಳು ಮತ್ತು ಭಾರತೀಯ ಸಂಸ್ಕೃತ ಕಾವ್ಯ ಮೀಮಾಂಸೆಯೂ ನಿರ್ಣಾಯಕವಾದ ನೆಲೆಯನ್ನು ಒದಗಿಸಿತು. ಸಂಸ್ಕೃತಿಯನ್ನು ಸಾಂಪ್ರದಾಯಿಕ ನೆಲೆಯ ಚಹರೆಗಳ ಮೂಲಕ ಚರ್ಚಿಸುವ ಪ್ರಯತ್ನಗಳು ನಡೆದವು. ಸಾಹಿತ್ಯ ಮತ್ತು ಸಂಸ್ಕೃತಿಗಳನ್ನು ಭಿನ್ನ ಮಾನದಂಡಗಳ ಮೂಲಕ ಗುರುತಿಸುವ ಅರ್ಥೈಸುವ, ವಿಶ್ಲೇಷಿಸುವ, ವಿವರಿಸುವ ಕಾರ್ಯಗಳಾದವು. ಸಂಸ್ಕೃತಿಯೊಳಗಿನ ಸಾಮಾಜಿಕ ವಿಮರ್ಶೆಯ ಪ್ರಶ್ನೆಗಳು ಮರೀಚಿಕೆಯಾಗಿರುವುದನ್ನು ನವೋದಯ ಕಾಲದಲ್ಲಿ ಗುರುತಿಸಬಹುದು.

"ಕೃತಿ ವಿಮರ್ಶೆಯಿಂದ ಕನ್ನಡದಲ್ಲಿ ಸಂಸ್ಕೃತಿಯ ವಿಮರ್ಶೆಯ ಕಡೆಗೆ ಹೊರಳಿದ್ದು ಬಹಳ ಮುಖ್ಯವಾದ ಪರಿವರ್ತನೆಯಾಗಿದೆ. ಸಾಹಿತ್ಯದ ಪ್ರಶ್ನೆಯೆನ್ನುವುದು ಯಾವತ್ತೂ ಸಾಂಸ್ಕೃತಿಕ ಅಭ್ಯಾಸದ ಪ್ರಶ್ನೆ ಆಗಿರುತ್ತದೆ. ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ಸಂಸ್ಕೃತಿಯ ಪ್ರಶ್ನೆಗಳೂ ಬಂದಾಗಲೂ ಅದರದೆ ನೆಲೆಗಳು ಒಂದಾಗಿಯೇ ಇಲ್ಲ. 'ಕೃತಿ–ಸಂಸ್ಕೃತಿ' ಯ ವಾಗ್ವಾದಗಳು ಅಂತಿಮವಾಗಿ ಆಶ್ರಯಿಸುವುದು ಸಂಸ್ಕೃತಿಯನ್ನು ಪಠ್ಯದಲ್ಲಿ ಹುಡುಕುದರ ಮುಖಾಂತರ. ಅದರಾಚೆಗೆ ದಾಟಲು ಬೇರೆ ವಿಧದ ಚರ್ಚೆಗಳೇ ಬೇಕಾದವು (ಕೇಶವ ಶರ್ಮ, 2012, ಪುಟ–37)

ಇದೇ ಕಾರಣದಿಂದಾಗಿ ಕಿ.ರಂ ನಾಗರಾಜ ಅವರ ವಿಮರ್ಶೆಯ ಮಾದರಿಯು ಅತ್ಯಂತ ಸಮತೋಲನದಿಂದ ಕೂಡಿರುವಂತದ್ದಾಗಿದೆ. ಕಿ.ರಂ ನಾಗರಾಜ ಅವರ ಲೇಖನಗಳ ಸಂಕಲನವಾದ 'ತೆರೆದ ಪಠ್ಯ' ಕೃತಿಯ ಬಗ್ಗೆ ವಿಮರ್ಶಕರಾದ ಪ್ರೊ. ವಿಕ್ರಮ ವಿಸಾಜಿ ಅವರು ತಮ್ಮ 'ಎಲ್ಲ ತತ್ವಗಳನ್ನು ಮೀರಿ ನೋಡುವ ಕೃತಿ' ಎಂಬ ಲೇಖನದಲ್ಲಿ "ಕೀರಂ ಕನ್ನಡ ಪರಂಪರೆಯ ತಾತ್ವಿಕ ಸಂಘರ್ಷದ ನೀಲಿನಕ್ಷೆಯನ್ನು ಅಪಾರ ಶ್ರದ್ಧೆಯಿಂದ ಹಿಡಿದುಬಿಡುತ್ತಾರೆ. ಒಂದು ಕೃತಿಯನ್ನು ಅಳೆಯುವಾಗಿನ ಸಮತೋಲನ ಮತ್ತು ಸೂಕ್ಷ್ಮತೆ ಒಂದು ಪರಂಪರೆಯನ್ನು ಅಳೆಯುವಾಗಲೂ ಇರುತ್ತದೆ. ಈ ಪಠ್ಯ ಮತ್ತು ಪರಂಪರೆಗಳ ಸುತ್ತ ಹಾಗು ಒಳಗೆ ಕ್ರಿಯಾಶೀಲವಾದ ಸಮಾಜವನ್ನು ಕಂಡರಿಸುವಾಗಲೂ ಇರುತ್ತದೆ. ಹೀಗೆ ಕೃತಿಕೇಂದ್ರಿತ ವಿಮರ್ಶೆ ಮತ್ತು ಸಮಾಜಕೇಂದ್ರಿತ ವಿಮರ್ಶೆಗಳ ನೈತಿಕ ಸಮ್ಮಿಲನವೊಂದು ಕೀರಂ ಬರಹಗಳಲ್ಲಿದೆ" (ಸಿದ್ಧಲಿಂಗಯ್ಯ (ಸಂ), 2012, ಪುಟ–19) ಎಂಬ ಅಭಿಪ್ರಾಯವು ಸಾಹಿತ್ಯ ಮತ್ತು ಪರಂಪರೆಯಿಂದ ದತ್ತವಾದ ಸಂಸ್ಕೃತಿ ವಿಮರ್ಶೆಯನ್ನು ಕಿ.ರಂ ಅವರು ನೋಡುತ್ತಿದ್ದ ಮಾದರಿಯನ್ನು ಸೂಚಿಸುತ್ತದೆ.

ಈ ಬಗೆಯ ಪಲ್ಲಟದೊಂದಿಗೆ ಕನ್ನಡದಲ್ಲಿಯೂ ಬರಗೂರು ರಾಮಚಂದ್ರಪ್ಪನವರ ಉಪಸಂಸ್ಕೃತಿ, ರಹಮತ್ ತರೀಕೆರೆಯವರ ಪ್ರತಿಸಂಸ್ಕೃಯ ವಿವೇಚನೆಯು ಆಧುನಿಕ ತಳಸಮುದಾಯಗಳ ಜೀವಪರ ಅಧ್ಯಯನಕ್ಕೆ ವೇಗವಾದ ಕೀಲಿಯನ್ನು ಅನುಮೋದಿಸುವಂತೆ ಮಾಡಿದೆ. ಇದು ಕನ್ನಡದ ಮಟ್ಟಿಗೆ ಶ್ರೇಷ್ಠತೆಯ ಜಾಯಮಾನವನ್ನು ಕಳಚಿಕೊಂಡು ಕನಿಷ್ಠವೆಂದು ಪರಿಭಾವಿಸಲಾದ ಕ್ಷೇತ್ರವನ್ನು ಕ್ರಿಯಾಶೀಲವಾಗಿಸುವ ಪ್ರಯತ್ನವಾಗಿದೆ.

"ಒಂದು ಸಾಹಿತ್ಯ ಕೃತಿಯನ್ನು ಓದುವುದೆಂದರೆ ಸಂಸ್ಕೃತಿಯ ವಿಭಿನ್ನ ಮಜಲುಗಳನ್ನು ಹುಡುಕುವುದೆಂದು ತಿಳಿದಿದ್ದೇವೆ. ಈ ದೃಷ್ಟಿಯಿಂದ ಇದು ಮಹತ್ವದ ಪ್ರಶ್ನೆಯಾಗಿದ್ದು ಇದರ ಹಿಂದಿನ ತಾತ್ವಿಕತೆಯು ಬೇರೆಬೇರೆ ರೀತಿಯ ಸಂಸ್ಕೃತಿಯ ಪ್ರಸ್ಥಾನವನ್ನು ಒಳಗೊಂಡಿವೆ. 'ದೇಶಿಯ ಸಂಸ್ಕೃತಿ' ಯೆಂಬ ತಾತ್ವಿಕ ನೆಲೆಯಿಂದ ಹೊರಡುವ ಈ ರೀತಿಯ ಸಾಂಸ್ಕೃತಿಕ ವಾಗ್ವಾದಗಳು 'ಏಕತೆಗಿಂತ ಬಹುತ್ವವನ್ನು ಪ್ರತಿಪಾದಿಸುತ್ತವೆ'. 'ಅಖಂಡವಾದ ಒಂದು ಭಾರತ' 'ಅಖಂಡವಾದ ಒಂದು ಕರ್ನಾಟಕ ಸಂಸ್ಕೃತಿ' 'ಒಂದು ತಾತ್ವಿಕತೆ' 'ಒಂದು ಸತ್ಯ' ಎಂಬ ತಿಳುವಳಿಕೆಯನ್ನು ಈ ರೀತಿಯ ನಿಲುವುಗಳು ವಿರೋಧಿಸುತ್ತವೆ (ಕೇಶವ ಶರ್ಮ, 2012, ಪುಟ–37)

ಓಲ್ ನಾಗಭೂಷಣ ಸ್ವಾಮಿ ಅವರು ಮಾಡಿದ ಸಂದರ್ಶನವೊಂದರಲ್ಲಿ ಕಿರಂ ನಾಗರಾಜ ಅವರು ತಮಗೆ ಸಂಸ್ಕೃತಿಯೇ ಮುಖ್ಯವಾದ ವಿಮರ್ಶೆಯ ಚಿಂತನಾವಾಹಕ ಎಂದು ಹೇಳಲು ಈ ಕೆಳಗಿನ ಕಾರಣವನ್ನು ಮುಂದಿಡುತ್ತಾರೆ. ಇಡೀ ನವೋದಯ ಸಾಹಿತ್ಯದ ನೋಡುವಿಕೆಯ ನೆಲೆಯೇ ಪ್ರಧಾನವಾಗಿ ಕವಿಯ ಮೂಲಕವಾಗಿ ಅದು ಪ್ರತಿಭೆಯ ಮೂಲಕ ಚಿಂತನೆ ಮಾಡುತ್ತೆ. ಅದರ ಪರಿಣಾಮವಾಗಿ ಈಗ ನೋಡಿ ತೀ.ನಂ.ಶ್ರೀ ಪಂಪನ ಬಗ್ಗೆ ಬರೆದಿರೋದನ್ನ ನೋಡಿದ್ರೆ ಅಲ್ಲಿ ಪಂಪನನ್ನ ಮುಖ್ಯನನ್ನಾಗಿ ಮಾಡಿದ್ದಾರೆಯೇ ಹೊರತು ಕೃತಿಯನ್ನಲ್ಲ. ಪಂಪ ಇದನ್ನ ಎಷ್ಟು ಚೆನ್ನಾಗಿ ಹೇಳಿದ್ದಾನೆ, ಎಷ್ಟು ಪರಿಣಾಮಕಾರಿಯಾಗಿ ಹೇಳಿದ್ದಾನೆ, ಎಷ್ಟು ಸೂಕ್ಷ್ಮವಾಗಿ ಹೇಳಿದ್ದಾನೆ, ಎಷ್ಟು ಹಿತಮಿತವಾಗಿ ಹೇಳಿದ್ದಾನೆ. ಅದಕೆಲ್ಲಕ್ಕೂ ಕೂಡ ಕವಿಯನ್ನೇ ಕಾರಣ ಮಾಡಿ ಒಂದು ರೀತಿ ಅದು ಅಪ್ರಿಸಿಯೇಷನ್ ನ ಪಂಪನೊ ಅಥವಾ ಅಪ್ರಿಸಿಯೇಷನ್ ನ ಪಂಪಭಾರತವೊ, ಆದಿಪುರಾಣವೊ ಗೊತ್ತಾಗಲ್ಲ. ಕವಿ ಕೇಂದ್ರಿತ ವಿಮರ್ಶೆಯಲ್ಲಿರುವಂತ ದೊಡ್ಡ ಮಿತಿಯನ್ನು ಇಡೀ ನವೋದಯದ ವಿಮರ್ಶೆ ಹಾಕಿಕೊಂಡಿತು. ನಮ್ಮ ನವೋದಯದ ಸಂದರ್ಭದಲ್ಲಿ ಬಹಳ ಮುಖ್ಯವಾದ ಚಿಂತನೆಗಳು ಬಂದಿವೆ. ತೀ.ನಂ.ಶ್ರೀ, ಡಿ.ಎಲ್.ಎನ್, ಕುವೆಂಪು ಆ ಕಾಲದಲ್ಲಿ ಪಂಪನ ಕುರಿತು ಚಿಂತನೆ ಮಾಡಿದ್ದಾರೆ. ಅವರೆಲ್ಲರೂ ಕೂಡ ಕವಿಕೇಂದ್ರಿತವಾಗಿ ಪಂಪನನ್ನ ನೋಡಿದರು. ಪಂಪ ಇಂಥ ಕಾವ್ಯವನ್ನ ಬರೀಬೇಕಾದ್ರೆ ತುಂಬಾ ಎಕ್ಸಲೆನ್ಸ್ ತೋರಿಸಿದಾನೆ ಅಂತ ಹೇಳಿದ್ರು. ಆ ಎಕ್ಸಲೆನ್ಸ್ ಏನು ಅಂತ ಹೇಳಲಿಲ್ಲ. ಆಗ ಒಂದು ರೀತಿಯಾದ ಅಪ್ರಿಸಿಯೇಷನ್ನು ಪ್ರಧಾನವಾಗಿತ್ತು. ಅದನ್ನೆ ಇಟ್ಟುಕೊಂಡಂಥವು ಇನ್ನು ಆಮೇಲೆ ಬಂದಂತಹ ಕೆಲವು ಚರ್ಚೆಗಳು ಕಲ್ಬುರ್ಗಿ, ಚಿದಾನಂದಮೂರ್ತಿ ಮುಂತಾದವರು ಚಾರಿತ್ರಿಕವಾಗಿ ಪ್ರಶ್ನೆಯನ್ನ ಒಬ್ಬ ಕವಿಗೆ ಆ ವಲಯವೂ ಬೇಕು ಅಲ್ಲವೆ? ಶೇಕ್ಸ್ ಪಿಯರ್ ಗೆ ಅಂತ ಚರ್ಚೆ ಹ್ಯಾಗೆ ದೊಡ್ಡಪ್ರಮಾಣದಲ್ಲಿ ಇದೆಯೊ ಅದು ಕೂಡ ಮುಖ್ಯವಾದದ್ದೆ. ಅದಕ್ಕೆ ನನಗೆ ಟೋಟಲ್ ಕಲ್ಚರಲ್ ಇಂಪಾರ್ಟೆನ್ಸ್ ಏನು

ಅನ್ನೋದು ಮುಖ್ಯ. (ನಾಗಭೂಷಣ ಸ್ವಾಮಿ, 2018, ಪುಟ– ಕೆಂಡಸಂಪಿಗೆ)

ಸಾಂಸ್ಕೃತಿಕವಾಗಿ ನಮ್ಮ ಹಳೆಯ ಪಠ್ಯಗಳಿಗೆ ಸಿಗಬೇಕಾದ ಸ್ಥಾನಮಾನಗಳು ಸಿಗಲಿಲ್ಲ ಎಂಬ ಓ.ಎಲ್ ನಾಗಭೂಷಣ ಸ್ವಾಮಿ ಅವರ ಪ್ರಶ್ನೆಗೆ ಕಿರಂ ಸಾಂಸ್ಕೃತಿ ವಿಮರ್ಶೆಯ ಜವಾಬ್ದಾರಿಯೊಂದನ್ನು ಮುಂದಿಡುವ ಪ್ರಯತ್ನ ಮಾಡಿದ್ದಾರೆ. ನಮ್ಮ ಎಲ್ಲಾ ಕ್ಲಾಸಿಕಲ್ ಗಳಿಗೂ ಹಾಗಾಗಿದೆ. ಏಕಂದ್ರೆ ಒಂದು ಕ್ಲಾಸಿಕ್ ನ ರೇಂಜೆ ಬೇರೆ ಅದರ ಸ್ಟ್ರಕ್ಚರ್ರೇ ಬೇರೆ. ಈಗ ಆದಿಪುರಾಣ ಹದಿನಾರು ಆಶ್ವಾಸಗಳ ಕಾವ್ಯ. ಅದರ ಒಂದು ಸ್ಟ್ರಕ್ಚರ್ ಅನ್ನು ರೂಪಿಸಿರೋ ನೆಲೆಯನ್ನ ಕುರಿತು ಆ ಕಾಲದಲ್ಲಿ ವಿಚಾರಗಳೇ ಇಲ್ಲ. ಹೀಗಾಗಿ ಅಲ್ಲಿ ಯಾವ ವಿಚಾರವೇ ಬರಲಿ ಕವಿಯ ಮೂಲಕ ನಿಯಂತ್ರಿತ ಆಗ್ತಾ ಇದೆ ಅಂತ ಧೋರಣೆ ಇದೆ. ಹೀಗಾಗಿ ಅದನ್ನ ಕವಿನಿಯಂತ್ರಿತ ಪಠ್ಯವಾಗಿ ಅದನ್ನ ನೋಡಲಾಗಿದೆಯೆ ಹೊರತು ಅದೊಂದು ದೊಡ್ಡ ಕಲ್ಚರಲ್ ಎಂಟಿಟಿ ಆಗಿ, ಕನ್ನಡ ಸಂಸ್ಕೃತಿಯ ನೆಲೆಯಿಂದ ಮೈಪಡೆದಿರುವ ಕೃತಿಯಾಗಿ, ಕನ್ನಡ ಸಂಸ್ಕೃತಿಯ ಮೂಲಚೂಲಗಳನ್ನ ಅದರ ಬೇರೆ ಬೇರೆ ಸೂಕ್ಷ್ಮ ಸ್ತರಗಳನ್ನ ಆ ಕೃತಿ ರೆಪ್ರೆಸೆಂಟ್ ಮಾಡುತ್ತೆ ಅನ್ನೊ ಕಲ್ಪನೆ ಇಲ್ಲವೆ ಇಲ್ಲ. ಅದಕ್ಕೆ ನೀವು ಹೇಳ್ತಿರೊ ಅಂಥ ಮಾತು ಕವಿ ಕೈಕಟ್ಟಿಸಿಕೊಂಡ ಜಟ್ಟಿಯಾಳಿನಂತೆ ಕಾಣ್ತನೆ ಅಂತ. ಹಾಗಾಂತ ಹೇಳಿದ್ರೆ ಅದೊಂದು ಮೌನವಾಗಿ ಕಾಣಿಸುತ್ತೆ ಹೊರತು ಬೇರೆಯಲ್ಲ (ನಾಗಭೂಷಣ ಸ್ವಾಮಿ, 2018, ಪುಟ– ಕೆಂಡಸಂಪಿಗೆ) ಎಂಬ ಮಾತನ್ನು ಕಿರಂ ನಾಗರಾಜ ಅವರು ಮುಂದಿಡುತ್ತಾರೆ.

ಡಯಲೆಕ್ಟಿಕ್ ಮೂಲದಿಂದ ಬೆಳೆದ ಬಂಡಾಯ ತಾತ್ವಿಕತೆಯು ದಲಿತ ತಾತ್ವಿಕತೆಯನ್ನು ಸಮನ್ವಯಗೊಳಿಸಿಕೊಳ್ಳುವಾಗ ಆಶಯವನ್ನು ಪ್ರತ್ಯೇಕಿಸಿ ಪರಿಭಾವಿಸುವುದು ಅನಿವಾರ್ಯವಾಯಿತು. ಇಂತಹ ಪ್ರತ್ಯೇಕಿಸುವಿಕೆ ಕಲಾನುಭವದ ಪ್ರಶ್ನೆಯನ್ನು ಮುನ್ನೆಲೆಗೆ ತಾರದೆ ಕೃತಿಯ ಆಶಯವನ್ನು ವಿಶ್ಲೇಷಿಸಿ ವ್ಯಾಖ್ಯಾನಿಸಲು ಅನುಕೂಲ ಮಾಡಿಕೊಟ್ಟಿತು. ಕೃತಿಯ ಕಲಾನುಭವದಿಂದ ಹೊರಹೋಗಿ ವ್ಯಾಖ್ಯಾನಿಸುವ ಅವಕಾಶವಾದೊಡನೆ ಕಲಾನುಭವದ ತಾತ್ವಿಕತೆಗಳಿಂದ ಕೃತಿಯ ಮೌಲ್ಯಮಾಪನ ಮಾಡಬೇಕಾದ ಒತ್ತಡ ಕಡಿಮೆಯಾಗುತ್ತದೆ. ಹಾಗಾಗಿ ದಲಿತ–ಬಂಡಾಯ ಸಾಹಿತ್ಯ ಚಳವಳಿಗಳ ಬಳಿಕ ಆಶಯದ ಹುಡುಕಾಟ ಮುಖ್ಯವಾಯಿತು. ಸಂಸ್ಕೃತಿ ವಿಮರ್ಶೆಯ ಹೆಸರಿನಲ್ಲಿ ಲೋಕ ವಿವರಗಳನ್ನು ಆಶಯಗಳ ವ್ಯಾಖ್ಯಾನಕ್ಕೆ ಬಳಸಿಕೊಳ್ಳುವುದು ಸುಲಭವಾಯಿತು. ಇದರಿಂದಾಗಿ, ಸಾಹಿತ್ಯ ವಿಮರ್ಶೆ ಬಳಸಿಕೊಳ್ಳಬೇಕಾಗಿದ್ದ ಸಮಾಜಶಾಸ್ತ್ರ, ರಾಜ್ಯಶಾಸ್ತ್ರ ಮೊದಲಾದ ಜ್ಞಾನ ಶಾಖೆಗಳ ಹಲವು ವಿಧಾನಗಳು ಸಾಹಿತ್ಯ ವಿಮರ್ಶೆ ಎಂಬ ಹೆಸರಿನಲ್ಲಿ ಬಳಕೆಯಾಗತೊಡಗಿದವು. ಕೃತಿಯ ಬದಲು ಕೃತಿಕಾರ ಮುಖ್ಯನಾಗತೊಡಗಿದ. ಕತೆಯನ್ನು ನಂಬಿ, ಕತೆಗಾರನನ್ನಲ್ಲ ಎಂಬ ವಿಚಾರ ಬದಿಗೆ ಸರಿಯಿತು.

ಕನ್ನಡ ವಿಮರ್ಶೆಯು ಕಳೆದ ಕೆಲವು ದಶಕಗಳಲ್ಲಿ ಸಾಗಿರುವ ದಾರಿಯನ್ನು ನೋಡಿದರೆ ಎರಡು ಬಗೆಯ ಬೆಳವಣಿಗೆಗಳು ಕಾಣುತ್ತವೆ. ಒಂದು: ಬರೆಹದಿಂದ ಬರೆಹಗಾರರ ಕಡೆಗೆ ಚಲನೆ. ಎರಡು: ಬರಹದಿಂದ 'ಸಂಸ್ಕೃತಿ'ಯ ಕಡೆಗೆ ಚಲನೆ. ಇವೆರಡೂ ಬೆಳವಣಿಗೆಗಳು ಎಲ್ಲೋ ಒಂದು ಕಡೆ ಒಂದನ್ನೊಂದು ಸೇರಿಕೊಂಡು ಚಲಿಸುವುದನ್ನೂ ನೋಡುತ್ತೇವೆ. ನವೋದಯದಲ್ಲಿ ರಸವಿಮರ್ಶೆ ಪ್ರಾಧಾನ್ಯ ಪಡೆದರೆ ನವ್ಯದಲ್ಲಿ ಪಠ್ಯ ವಿಮರ್ಶೆ ಮೇಲುಗೈಯಾಯಿತು. ನಂತರ ಬಂದ ಬಂಡಾಯ ವಿಮರ್ಶೆಯು ಸಂಸ್ಕೃತಿ ವಿಮರ್ಶೆಯನ್ನು ಕಟ್ಟಿಕೊಳ್ಳತೊಡಗಿತು. ಇಂದು ಸಾಮಾಜಿಕ ಸಾಂಸ್ಕೃತಿಕ ವಿಶ್ಲೇಷಣೆ ಎಂಬಲ್ಲಿಗೆ ಬಂದು ನಿಂತಿದೆ.

ಸಂಸ್ಕೃತಿ ವಿಮರ್ಶೆ ಎನ್ನುವುದು ವಿಶಾಲಾರ್ಥದಲ್ಲಿ ಸಂಸ್ಕೃತಿಯ ಅರ್ಥವೇ. ಅಂದರೆ ಅದು ಜನಸಮುದಾಯದ ನಡೆ, ನುಡಿ, ಆಚಾರಗಳನ್ನು ಒಳಗೊಂಡಿರುವಂಥದ್ದು. ಆದರೆ ಸಂಸ್ಕೃತಿಯ ವಿಷಯ ಪ್ರಸ್ತಾಪವಾದ ಕೂಡಲೇ ಅಲ್ಲಿ ಅನನ್ಯತೆಯ ಮಾತೂ ಬರುತ್ತದೆ ಹಾಗೆಯೇ ಅನ್ಯತೆಯ ಸಂಗತಿಯೂ ಬರುತ್ತದೆ. ಶ್ರೇಷ್ಠ, ಕನಿಷ್ಠಗಳೆಂಬ ಅಳತೆಗೋಲುಗಳನ್ನು ಹಿಡಿದ ತಕ್ಷಣ ಅಲ್ಲಿ ರಾಜಕಾರಣವು ಪ್ರವೇಶ ಮಾಡುತ್ತದೆ. ಸಂಸ್ಕೃತಿ ವಿಮರ್ಶೆಯ ಅಗತ್ಯವನ್ನು ರೂಪಿಸುವ ಯುಗಧರ್ಮದ ಒತ್ತಡವೂ ಇದರ ಹಿಂದೆ ಕೆಲಸ ಮಾಡುತ್ತದೆ. ಸಾಹಿತ್ಯ ವಿಮರ್ಶೆಯು ಸಂಸ್ಕೃತಿಯ ಜುಂಗು ಹಿಡಿದು ಹೊರಟಾಗ ಅದು ಅನಿವಾರ್ಯವಾಗಿ ರಾಜ ಕಾರಣದ ಸ್ವರೂಪವನ್ನು ಪಡೆದುಕೊಳ್ಳುತ್ತದೆ. ತನ್ನ ಅಭಿಪ್ರಾಯಗಳನ್ನು ರೂಪಿಸಿಕೊಳ್ಳುವ ಹೊತ್ತಿನಲ್ಲಿಯೇ ಒಂದು ಆಯ್ಕೆಯನ್ನು ಮುನ್ನೆಲೆಗೆ ತರುತ್ತಾ ಇರುತ್ತದೆ.

ಕಿ. ರಂ. ನಾಗರಾಜ ಅವರಿಗೆ ಪಠ್ಯಗಳು ಕಾಣುವುದೆಲ್ಲವೂ ಇದೇ ಬಗೆಯ ಸಂಸ್ಕೃತಿಯ ನೆಲೆಗಟ್ಟಿನ ಮೂಲಕವಾಗಿದೆ. ನನಗೆ ಸಂಸ್ಕೃತಿ ವಿಶಿಷ್ಟವಾದ ಮಹತ್ವದ ಪ್ರಶ್ನೆಗಳನ್ನು ಒಂದು ಕಾಲದ ಬಿಂದುವಿನಲ್ಲಿ ಪಂಪ ಆದಿಪುರಾಣದ ಮೂಲಕ ಎದುರಾಗ್ತಿದ್ದಾನೆ ಅನ್ಸುತ್ತೆ. ಉದಾಹರಣೆಗೆ ಧರ್ಮದ ಪ್ರಶ್ನೆ ಇರಬಹುದು. ಒಂದು ಸಂಸ್ಕೃತಿಯಲ್ಲಿ ಧರ್ಮದ ನಿಜವಾದಂಥ ನೆಲೆ ಯಾವ ಯಾವ ರೀತಿಯಾದ ಜಿಜ್ಞಾಸೆಗೆ ಗುರಿಯಾಗುತ್ತೆ? ಈಗ ಒಂದು ಸಂಸ್ಕೃತಿಯ ಅನೇಕ ಪ್ರಶ್ನೆಗಳು ಒಂದು ಪ್ರಶ್ನೆ ಅಂತ ಹೇಳ್ತಾಯಿಲ್ಲ. ಅದು ಧರ್ಮದ ಪ್ರಶ್ನೆ, ಧರ್ಮ ಮತ್ತು ಇನ್ನಿತರ ಧರ್ಮಗಳ ನಡುವಣ ಸಂಬಂಧದ ಪ್ರಶ್ನೆ ಇದೆ. ಧರ್ಮದ ಬಗ್ಗೆ ಮಾತನಾಡುವಾಗ ಅದು ಜೈನಧರ್ಮದ ಪ್ರಶ್ನೆಯನ್ನು ಪ್ರಧಾನವಾಗಿ ವಿಚಾರ ಮಾಡುತ್ತೆ ಅಂತ. ಇಲ್ಲಿ ಒಂದು ಸಂಸ್ಕೃತಿಯೊಳಗೆ ಒಂದೇ ಧರ್ಮ ಇರ್ತದೆಯೇ? ಬೇರೆ ಬೇರೆ ಧರ್ಮಗಳೊಂದಿಗೆ ಆ ರೀತಿಯಾದ ಸಂಬಂಧ, ಅಂತರ್ ವಿರೋಧ, ಸಹಮತ ಇವೆಲ್ಲಾ ಇದ್ದೆ ಇರುತ್ತೆ (ನಾಗಭೂಷಣ ಸ್ವಾಮಿ, 2018, ಪುಟ– ಕೆಂಡಸಂಪಿಗೆ)

**ಸಂಸ್ಕೃತಿ ವಿಮರ್ಶೆಯ ತಕರಾರುಗಳು**

1. ಕನ್ನಡದಲ್ಲಿ ಈ ಬಗೆಯ ಸಂಸ್ಕೃತಿ ವಿಮರ್ಶೆ ಹುಟ್ಟಿಕೊಳ್ಳಲು ಕಾರಣವೇನು
2. ಸಾಹಿತ್ಯದ ಓದೆಂದರೆ ಸಂಸ್ಕೃತಿಯ ಅಭ್ಯಾಸಗಳನ್ನು 'ಬಹುತ್ವ'ದಲ್ಲಿ ಇಡುವುದೆ?
3. ಸಾಮಾನ್ಯರು ಈ ಬಗೆಯ ಮಾದರಿಯನ್ನು ಗಂಭೀರವಾಗಿ ಪರಿಗಣಿಸಿದ್ದಾರೆಯೆ?

ಸಾಹಿತ್ಯ ವಿಮರ್ಶೆಯೊಳಗೆ ಸಂಸ್ಕೃತಿಯ ಪರಿಕಲ್ಪನೆಯು ಒಂದು ಚಿಂತನೆಯ ರೂಪದಲ್ಲಿ ವ್ಯಕ್ತವಾಗಿರುವುದನ್ನು ಕಾಣಬಹುದು. ಮುಂದೆ ಸಂಸ್ಕೃತಿಯೇ ಹೇಗೆ ಒಂದು ವಿಮರ್ಶಾ ಪ್ರಸ್ಥಾನದ ಭಾಗವಾಗಿ ಕಾರ್ಯನಿರ್ವಹಿಸುತ್ತಿದೆ ಎಂಬುದನ್ನು ಅರ್ಥಮಾಡಿಕೊಳ್ಳಬಹುದು.

"ಅದು ಸಾಹಿತ್ಯ ವಿಮರ್ಶೆಯಲ್ಲಿ ಸಂಸ್ಕೃತಿಯ ಪ್ರಶ್ನೆಯು ಬಂತು. ಸಂಸ್ಕೃತಿಯ ಪ್ರಶ್ನೆಯನ್ನು ವಿಮರ್ಶಕರು ಕೃತಿಯ ಒಳಗೆ ವ್ಯಕ್ತವಾದ ಸಂಸ್ಕೃತಿಯೆಂಬ ಅರ್ಥದಲ್ಲಿ ಚರ್ಚಿಸಿದರು. ಕೃತಿಯ ಒಳಗಡೆ ವ್ಯಕ್ತವಾದ ಸಂಸ್ಕೃತಿಗೂ ಹೊರಗಡೆ ಇರುವ ಸಂಸ್ಕೃತಿಗೂ ವ್ಯತ್ಯಾಸವಿದ್ದೇ ಇರುತ್ತದೆ. ಒಂದು ಉಕ್ತವಾದ ಸಂಸ್ಕೃತಿಯಾದರೆ, ಮತ್ತೊಂದು ಅನುಕ್ತ ಸಂಸ್ಕೃತಿ. ಪಠ್ಯದ ಮೂಲಕ ಉಕ್ತಗೊಂಡ ಸಂಸ್ಕೃತಿಯು ಆಯಾ ಬರಹಗಾರರ ಚಾರಿತ್ರಿಕ ಸಂದರ್ಭದ ಹಿನ್ನೆಲೆಯಿಂದ ನಿರ್ದೇಶಿತವಾಗಿರುತ್ತದೆ. ಆದರೆ ಕೃತಿಯ ಒಳಗೆ ನಿರ್ದೇಶಿತವಾದ ಸಂಸ್ಕೃತಿಯನ್ನು ಒಬ್ಬ ಬರಹಗಾರ ಹೇಗೆ ಗ್ರಹಿಸುತ್ತಾನೆ ಎನ್ನುವ ಹಿನ್ನೆಲೆಯಿಂದ ನಾವು

ಅರ್ಥವಿಸಬೇಕಾಗುತ್ತದೆ. ಕೃತಿಯ ಒಳಗೆ ರೂಪುಗೊಂಡ ಸಂಸ್ಕೃತಿಯು ನಮ್ಮೆಲ್ಲಾ ತೀರ್ಪಿಗೆ ಕೊನೆಯ ಸಾಕ್ಷಿಯಾಗಬೇಕಿಲ್ಲ. ದೇಸಿ ಸಂಸ್ಕೃತಿ, ಪರ್ಯಾಯ ಸಂಸ್ಕೃತಿ, ಪ್ರತಿ ಸಂಸ್ಕೃತಿ ಇತ್ಯಾದಿ ಪರಿಭಾಷೆಗಳು ಸಾಹಿತ್ಯ ವಿಮರ್ಶೆಯಲ್ಲಿ ಈಗ ಹಾಸುಹೊಕ್ಕಾಗಿವೆ. ದೇಸಿಯನ್ನು ಪಶ್ಚಿಮದ ಬಿಡುಗಡೆ ರೂಪಿಸುವ ಪ್ರಯತ್ನದ ಹಾಗೆ ಕಾಣಿಸುತ್ತದೆ. ಪೂರ್ಣವಾಗಿ ದೇಸಿಗೆ ಮರಳುವುದೆಂದರೆ ಯಾವ ದೇಸಿ? ಎನ್ನುವ ಪ್ರಶ್ನೆಯು ಬರುತ್ತದೆ. ಹತ್ತಿಯ ಕಾರ್ಖಾನೆಯ ಬದಲು ಚರಕ ಪ್ರಸ್ತುತವೇ? ಜಾಗತಿಕ ವಿದ್ಯಮಾನಗಳು ಬದಲಾಗುತ್ತಿರುವ ಸನ್ನಿವೇಶದಲ್ಲಿ ದೇಸಿಯು ಯಾವ ಹಾದಿಯನ್ನು ಹಿಡಿಯಬಹುದು" (ಕೇಶವ ಶರ್ಮ, 2012, ಪುಟ–49, 50)

ಸಂಸ್ಕೃತಿ ವಿಮರ್ಶೆ ಅಥವಾ ಸಂಸ್ಕೃತಿ ಚಿಂತನೆ ಎಂಬ ಪರಿಭಾಷೆಯ ಮೂಲಕ ಸಮುದಾಯವೊಂದರ ಭೌತ ಮತ್ತು ಅಭೌತ ಪ್ರಜ್ಞೆಯನ್ನು ಸಾಂಸ್ಥಿಕ ರೂಪದಲ್ಲಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಜಾಗತೀಕರಣ ಮತ್ತು ಕಾರ್ಪೋರೇಟ್ ಅನುಸಂಧಾನದಿಂದ ನಮ್ಮ ನಡುವಿನ ಸಬಾಲ್ಟನ್ ಅಥವಾ ತಳಸಮುದಾಯಗಳ ಜ್ಞಾನಮೀಮಾಂಸೆಯು ಆಧುನಿಕತೆಯ ಕುತಂತ್ರಗಳು ಹಂಚಿಗೆ ಸರಿಸಿದೆ. ಒಂದು ಕಾಲದಲ್ಲಿ ವಸಾಹತುಶಾಹಿತ್ವ ಹೇಗೆ ಸ್ಥಳಿಯವಾದದ್ದನ್ನು ನಿರ್ಲಕ್ಷದಿಂದ ಅಥವಾ ಅನಾಗರೀಕವಾದದ್ದು ಎಂಬ ನಿರ್ವಚನದಿಂದ ಮುಂದಿಟ್ಟಿತು. ಮುಂದೆ ಈ ನಗಣ್ಯ ಪ್ರಜ್ಞೆಯಿಂದ ಓರಿಯಂಟಲಿಸಂ ಎಂಬ ಚಿಂತನೆ ಹುಟ್ಟಿಕೊಂಡಿತು. ಪಶ್ಚಿಮ ಪೂರ್ವವನ್ನು ಕಾಣುವ ಬಗೆಯನ್ನು ತಾತ್ವೀಕರಿಸಿ ನಿರೂಪಿಸುವ ಪ್ರಯತ್ನವನ್ನು ಎಡ್ವರ್ಡ್ ಸೈದ್ ಎಂಬ ಚಿಂತಕ ಮಾಡಿದ.

"ಓರಿಯೆಂಟಲ್ ಪರಿಕಲ್ಪನೆಯ ಸೃಷ್ಟಿ ಹಾಗೂ ಓರಿಯಂಟೆಲ್‌ವಾದಗಳೆರಡೂ ಪಶ್ಚಿಮ ರೂಪಿಸಿಕೊಂಡ ನಿಯಂತ್ರಣ ಹಾಗೂ ಯಜಮಾನಿಕೆಗಳ ಸಾಧನಗಳಾಗಿ ನಿರಂತರವಾಗಿ ಮುಂದುವರೆಯುವುದನ್ನು ಓರಿಯಂಟಲ್‌ವಾದಿ ರಾಜಕಾರಣದ ಸೂಕ್ಷ್ಮ ರೂಪಗಳನ್ನು ಶೋಧಿಸುವ ಎಡ್ವರ್ಡ್ ಸೈದನ ಅಧ್ಯಯನ ತೋರಿಸುತ್ತದೆ. ಸೈದನ ಪ್ರಕಾರ ಓರಿಯೆಂಟೆಲ್ ಅಥವಾ ('ಪ್ರಾಚೀನ' ಅಥವಾ 'ಹಳೆಯ' ಜಗತ್ತು) ಎಂಬ ಸೃಷ್ಟಿಯೇ ಯೂರೋಪಿನ ಆಲೋಚನಾ ಕ್ರಮದ ಫಲ. ಯೂರೋಪ್ ತಾನು 'ಓರಿಯೆಂಟಲ್' ಎಂದು ಕರೆದ ಜಗತ್ತಿನ ಬಗ್ಗೆ ವ್ಯಾಖ್ಯಾನ ಮಾಡುವುದು, ಆ ವ್ಯಾಖ್ಯಾನಗಳನ್ನು ಸಮರ್ಥಿಸುವುದು, ಆ ಜಗತ್ತನ್ನು ವರ್ಣಿಸುವುದು, ಅದನ್ನು ಕುರಿತು ಬೋಧಿಸುವುದು ಹಾಗೂ ಅಲ್ಲಿ ನೆಲೆಸುವುದು ಮತ್ತು ಆಳುವುದು..." (ನಟರಾಜ ಹುಳಿಯಾರ್, 2017, ಪುಟ–9) ಎಂಬ ಕ್ರಮವನ್ನು ಕಾಣಬಹುದು.

ಅದೇ ರೀತಿಯಲ್ಲಿ ಮುಖ್ಯಭೂಮಿಕೆಯ ಸಂಸ್ಕೃತಿ ಚಿಂತನೆಗಳು ಮೇಲ್ಮುಖವಾದ ಗ್ರಹಿಕೆಗಳನ್ನ ಮಾತ್ರ ಮುಂದಿಡುತ್ತದೆಯೇ ವಿನಃ ತಳಮುಖಿ ಅಥವಾ ಜನಪರವಾದ ಬಹು ಆಯಾಮದ ಸಂಸ್ಕೃತಿಯ ಕುರಿತು ಕಣ್ಣೆತ್ತಿಯು ನೋಡದಿರುವುದನ್ನು ಎಪ್ಪತ್ತರ ದಶಕದವರೆಗೂ ಕನ್ನಡ ಸಾಹಿತ್ಯ ಸಂಸ್ಕೃತಿ ಅಧ್ಯಯನದೊಳಗೆ ಗುರುತಿಸಬಹುದು. ಅವರೆಗೂ ಬಳಕೆಯಲ್ಲಿದ್ದ ಸಂಸ್ಕೃತಿ ಪದವು ಸಮಾಜದ ಮುಖ್ಯನೆಲೆಯ ಸಮುದಾಯವನ್ನ ಕೇಂದ್ರವಾಗಿರಿಸಿಕೊಂಡ ಚಿಂತನೆಗಳನ್ನು ಹುಟ್ಟುಹಾಕಿದವು. ಆದರೆ ಎಪ್ಪತ್ತರ ದಶಕದ ನಂತರ ನವ್ಯ ಸಾಹಿತ್ಯ ಮತ್ತು ಬೋಧಕ ವಿಮರ್ಶಕರ ದೊಡ್ಡಗುಂಪು ವಿಶ್ವವಿದ್ಯಾನಿಲಯದೊಳಗೆ ಪ್ರವೇಶ ಪಡೆದುಕೊಂಡಿತು. ಆಧುನಿಕ ಶಿಕ್ಷಣ ಸಂಸ್ಕೃತಿಯನ್ನು ವಿಮರ್ಶಾತ್ಮಕವಾಗಿ ನೋಡುವ ಅಧ್ಯಯನಮಾಡುವ ಹಾಗೂ ಆ ಹಿನ್ನೆಲೆಯಲ್ಲಿ ಸೃಜನಶೀಲ ಸಾಹಿತ್ಯವನ್ನು ಕಟ್ಟುವ ಕೆಲಸವನ್ನು ಮಾಡಿದರು.

ಪ್ರೊ. ರಹಮತ್ ತರಿಕೇರೆ, ಪ್ರೊ ಪುರುಷೋತ್ತಮ ಬಿಳಿಮಲೆಯವರ ಆಧುನಿಕ ಚಿಂತನ ಮಾದರಿಯು ಸಾಂಸ್ಕೃತಿಕ ವಿಮರ್ಶೆಯೊಂದನ್ನು ಕಟ್ಟುವ ಕೆಲಸದಲ್ಲಿ ತೊಡಗಿದೆ. ರಹಮತ್ ತರಿಕೆರೆಯವರ ಪ್ರತಿಸಂಸ್ಕೃತಿಯ ಹುಡುಕಾಟ, ಬಿಳಿಮಲೆಯವರ ಸಂಸ್ಕೃತಿಯ ಮೇಲಿನ ವೈದಿಕ ಸಂಸ್ಕೃತಿಯ ನಿರೂಪಣೆಗಳಿಗೆ ತಳಸಮುದಾಯದ ಆಚರಣಾ ವಿನ್ಯಾಸದಿಂದಲೇ ಉತ್ತರಿಸುವ ಮಾದರಿಗಳು ಸಾಂಸ್ಕೃತಿಕ ವಿಮರ್ಶೆಯನ್ನು ಗಟ್ಟಿಯಾಗಿಸುವ ಕ್ರಮವಾಗಿದೆ. ರಹಮತ್ ತರೀಕರೆಯವರು ಶಂಬಾ ಜೋಶಿಯವರ ನಂತರ ಕನ್ನಡದಲ್ಲಿ ಗಟ್ಟಿಯಾದ ಸಂಸ್ಕೃತಿ ಕಥನವನ್ನು ವಿನ್ಯಾಸಗೊಳಿಸುವ ಪ್ರಯತ್ನವನ್ನು ಮಾಡುತ್ತಾರೆ.

ನಮ್ಮ ನಡುವೆ ನಡೆಯುತ್ತಿರುವ ಸಾಂಸ್ಕೃತಿಕ ವಿಮರ್ಶೆಯ ಪ್ರಕ್ರಿಯೆಗಳು ಕಲ್ಚರಲ್ ಆಕ್ಟಿವಿಸಂ ನ ಭಾಗ ಎಂದು ಪರಿಗಣಿಸಬಹುದು. ಸಾಹಿತ್ಯಕ ಓದಿನ ಮೂಲಕ ಸಂಸ್ಕೃತಿಯೊಂದನ್ನು ಗ್ರಹಿಸುವ ಆ ಮೂಲಕ ಸಂಸ್ಕೃತಿಯೊಳಗೆ ಅಂತಸ್ತವಾಗಿರುವ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಧಾರ್ಮಿಕ ಅಂಶಗಳನ್ನು ವಿಮರ್ಶಿಸುವ ವಿಶ್ಲೇಷಿಸುವ ಕೆಲಸವು ಈ ಹೊತ್ತಿನ ಕನ್ನಡ ಸಾಹಿತ್ಯ ಸಂಸ್ಕೃತಿ ಚಿಂತಕರು ಮಾಡುತ್ತಿದ್ದಾರೆ. ಕೋಮುವಾದವನ್ನು, ಆಹಾರದ ಬಗೆಗಿನ ದ್ವಂದ್ವಗಳನ್ನು, ಜಾತಿ ಅಸ್ಪೃಶ್ಯತೆ, ಪ್ರೀತಿ ಪ್ರೇಮ, ಕಾಮ, ವಸ್ತ್ರ ಉಡುಪು ಹೀಗೆ ನಮ್ಮ ಬದುಕಿನ ಭಾಗವಾಗಿರುವ ಹಲವು ವಿಚಾರಗಳನ್ನು ಪರ ವಿರೋಧಾಭಾಸದ ನೆಲೆಯಲ್ಲಿ ನೋಡುವ ಜನಸಮುದಾಯದ ಮಧ್ಯೆ ಸಾಂಸ್ಕೃತಿಕ ವಿಮರ್ಶಕನ ಜವಾಬ್ದಾರಿಯು ಜೀವಪರವಾಗಿರಬೇಕು. ಜೀವಪರ ಮೀಮಾಂಸೆಯೊಂದನ್ನು ಕಟ್ಟುವ ಕಾಯಕವನ್ನು ಸಾಂಸ್ಕೃತಿಕ ವಿಮರ್ಶಕರು ಮುನ್ನೆಲೆಗೆ ತರುವ ಅಗತ್ಯ ಇದೆ.

ಡಿ ಆರ್ ನಾಗರಾಜ ಅವರ ಅಲ್ಲಮ ಪ್ರಭು ಮತ್ತು ಶೈವಪ್ರತಿಭೆ ಕಲ್ಚರಲ್ ಆಕ್ಟಿವಿಸಂನ ಒಂದು ಭಾಗ. ಪ್ರಾಚೀನ ಭಾರತದ ದಾರ್ಶನಿಕ ಪರಂಪರೆಯೊಳಗೆ ಶೂದ್ರನಾದ ಅಲ್ಲಮ ಮುಖಾಮುಖಿಯಾಗುವುದು ಮೇಲ್ಜಾತಿ ಕೇಂದ್ರಿತ ಚಿಂತನಾ ಮಾದರಿಗೆ. ಭಾರತೀಯ ತತ್ವಶಾಸ್ತ್ರದಲ್ಲಿ ಅಲ್ಲಮನಿಗೆ ಸಿಗಬೇಕಾದ ಸ್ಥಾನಮಾನಗಳು ಸಿಗದಿದ್ದಾಗ ಮಣಲ್ಯಮಾಪನ ಪ್ರಕ್ರಿಯೆಯ ಆಧಾರದಲ್ಲಿ ಅಲ್ಲಮನ ದಾರ್ಶನಿಕತೆಯನ್ನು ತಾರ್ಕಿಕವಾಗಿ ಪ್ರತಿಪಾದಿಸುವ ಕೆಲಸವನ್ನು ಡಿ ಆರ್ ನಾಗರಾಜ ಅವರು ಮಾಡುತ್ತಾರೆ. ಈ ಹೋರಾಟವು ಸಾಹಿತ್ಯದೊಳಗಿನ ಸಾಂಸ್ಕೃತಿಕ ರಾಜಕಾರಣದ ಆಯಾಮವಾಗಿದೆ.

ಕೆಲವು ವರ್ಷಗಳ ಹಿಂದೆ ನಮ್ಮ ಸಂಸ್ಕೃತಿ ಅಳಿವಿನ ಅಂಚಿನಲ್ಲಿದೆ. ಸಂಸ್ಕೃತಿಯನ್ನು ಉಳಿಸಬೇಕು ಎಂಬ ಕೂಗು ಜನಧ್ವನಿಯಾಗಿ ಕೇಳಿಸಿಕೊಂಡಾಗ ಅಕೆಡೆಮಿಕ್ ಮತ್ತು ಸಂಶೋಧನಾ ವಲಯವು ಆ ಕುರಿತು ಸಾಮುದಾಯಿಕವಾಗಿ ಆ ಎಲ್ಲಾ ಸಂಸ್ಕೃತಿ ಚಂತನಾ ಮಾದರಿಗಳನ್ನು ಬರವಣಿಗೆಗೂ, ಪ್ರಾಜೆಕ್ಟಿನ ಭಾಗವಾಗಿ ಕೈಗೊಂಡ ಯೋಜನೆಯಾಗಿ ರೂಪಿಸಿ ಸುಮ್ಮನಾಯಿತು. 2014 ನಂತರದ ಭಾರತದ ರಾಜಕೀಯ ವಿನ್ಯಾಸದಲ್ಲಾದಂತಹ ಬದಲಾವಣೆಯು ಸಂಸ್ಕೃತಿ ಪರಿಕಲ್ಪನೆಯ ಆಯಾಮವನ್ನೇ ಬದಲಾಯಿಸಿತು. ಶ್ರೇಷ್ಠ ಕನಿಷ್ಠಗಳ ನಡುವೆ ರಾಷ್ಟ್ರೀಯತೆ, ಏಕ ಮಾದರಿಯ ವಿನ್ಯಾಸ ಕ್ರಮಗಳು, ಬಹುತ್ವದ ನಿರಾಕರಣೆ ಹೀಗೆ ಧಾರ್ಮಿಕ ಹಿಡನ್ ಅಜೆಂಡಾವಾಗಿ ರೂಪುಗೊಂಡ ರಾಜಕೀಯ ಪರಿಪ್ರೇಕ್ಷ್ಯೆಯ ಮುಂದೆ ಥಿಯರೈಸ್ಡ್ ಅಲ್ಲದ ಜೀವನ ಕ್ರಮದಲ್ಲಿ ಬೇರೂರಿದ್ದ ಸಂಸ್ಕೃತಿಯ ಅಂಶದೊಳಗೆ ಹಲವು ಕ್ರಿಯಾವಿಧಿಗಳು ಆಮದಾದವು. ಮುಂದೆ ತನ್ನ ಮೂಲ ಸ್ವರೂಪವನ್ನು ಕಳೆದುಕೊಂಡು ತನ್ನದಲ್ಲದ ಹೇರಿಕೆಯ ಮೂಲಕ ಜೀವಪರ ಚಿಂತನೆಗಳಿಗೆ ಮುಖಾಮುಖಿಯಾಗಿ ಜೀವವಿರೋಧಿ ನೆಲೆಯೊಂದು ಹುಟ್ಟಿಕೊಂಡಿತು. ಆಗ ಹುಟ್ಟಿಕೊಂಡದ್ದೆ ಕಲ್ಚರಲ್ ಆಕ್ಟಿವಿಸಂ. ಇದೊಂದು ಅಕೆಡೆಮಿಕ್ ಆದ ಜನಪರ ಚಳುವಳಿ.

ಕನ್ನಡದ ಖ್ಯಾತ ಚಿಂತಕರಾದ ಎಂ ಎಂ ಕಲಬುರ್ಗಿ ಹತ್ಯೆ, ಡಾ.ಯು. ಆರ್ ಅನಂತಮೂರ್ತಿಯವರ ಸಾವನ್ನು ಸಂಭ್ರಮಿಸಿದ ಬಗೆ, ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಹೀಗೆ ನಮ್ಮನಡುವಿನ ಸಾಂಸ್ಕೃತಿಕ ಚಿಂತನಾ ಮಾದರಿಯ ಪರವಾಗಿ ಕೆಲಸ ಮಾಡಿದವರನ್ನು ಇಲ್ಲವಾಗಿಸುವ ಕ್ರಮವೇನಿದೆ ಇದು ಈ ಹೊತ್ತಿನ ಸಾಂಸ್ಕೃತಿಕ ಚಿಂತಕರಿಗೆ ಇರುವ ಬಹುದೊಡ್ಡ ಆತಂಕ. ಜನನುಡಿ, ಜನಸಂಸ್ಕೃತಿ ನಡಿಗೆ, ಉಡುಪಿ ಚಲೋ, ನಾನು ಗೌರಿ ಮುಂತಾದ ಕಾರ್ಯಕ್ರಮಗಳು ಈ ಸಾಂಸ್ಕೃತಿ ವಿಮರ್ಶೆಯ ಯೋಜನಾಕಾರ್ಯವಾಗಿದೆ.

ಅಂಬೇಡ್ಕರ್, ಗಾಂಧಿ, ಲೋಹಿಯ, ಮೌಲಾನ ಅಬುಲ್ ಕಲಾಂ ಅಝಾದ್ ಮುಂತಾದವರ ರಾಜಕೀಯ ಮೀಮಾಂಸೆಯನ್ನು ಸಂಸ್ಕೃತಿ ವಿಮರ್ಶೆಯನ್ನು ರೂಪಿಸಲು ಆಕರ ಮಾತು ಪರಿಕರವಾಗಿ ಬಳಸುವ ಪ್ರಯೋಗಗಳು ನಡೆದಿದೆ. ನಾಟಕಕಾರ ಪ್ರಸನ್ನ ಅವರ ಯಂತ್ರಗಳನ್ನು ಕಳಚೋಣ ಬನ್ನಿ, ಶೂದ್ರರಾಗೋಣ ಬನ್ನಿ, ಸ್ವದೇಶಿ ಉತ್ಪನ್ನಗಳ ಬಳಕೆ ಗಾಂಧಿ ಚಿಂತನೆಯೊಂದ ಹುಟ್ಟಿಕೊಂಡ ಕಲ್ಚರಲ್ ಆಕ್ಟಿವಿಸಂನ ವಿಮರ್ಶಾತ್ಮಕ ಪ್ರಯೋಗ.

ಇನ್ನೂ ತಳಸಮುದಾಯಗಳ ಅಧ್ಯಯನವು ಸಂಸ್ಕೃತಿ ವಿಮರ್ಶೆಯ ಭಾಗ ಎಂದು ಕರಯಬಹುದು. ಕನ್ನಡ ಸಾಹಿತ್ಯ ಸಂಸ್ಕೃತಿಯೊಳಗಿನ ಮೇಲ್ವರ್ಗ ಕೇಂದ್ರಿತ ಚಿಂತನಾ ಮೀಮಾಂಸೆಯನ್ನು ಬಿಡಿಸಿಕೊಂಡು ಜನಪರವಾದ ಬಹುಮುಖಿ ಚಿಂತನೆಗಳನ್ನು ಒಳಗೊಳ್ಳುವ ಪ್ರಯತ್ನವನ್ನು ಈ ತಳಸಮುದಾಯಗಳ ಅಧ್ಯಯನಮಾಡಿದೆ. ಈ ಅಧ್ಯಯನಕ್ಕೆ ಕಾರಣ ದಲಿತರು, ಅಲ್ಪಸಂಖ್ಯಾತರು, ಮಹಿಳೆಯರು ಮತ್ತು ಶೂದ್ರವರ್ಗಕ್ಕೆ ದೊರೆತಂತಹ ಶಿಕ್ಷಣ. ವಸಾಹತ್ತೋತ್ತರ ಚಿಂತನಾ ಮಾದರಿಗಳನ್ನು ಈ ಮೊದಲಿದ್ದಂತಹ ವೈದಿಕಶಾಹಿ ಪ್ರಣೀತವಾದ ಚಿಂತನೆಯನ್ನು ತಿರಸ್ಕರಿಸುವ ಮತ್ತು ಆ ತಿರಸ್ಕಾರಕ್ಕೆ ಸರಿಯಾದ ಸಮರ್ಥವಾದ ಆಧಾರವನ್ನು ಒದಗಿಸುವ ಕಾರ್ಯ ಮಾಡಿತು. ಅಂಬೇಡ್ಕರ್ ಅವರ ಬುದ್ಧ ಮತ್ತು ಆತನ ಧರ್ಮ ಎಂಬ ಸಂಶೋಧನೆಯು ವೈದಿಕರ ಕೈಯಲ್ಲಿ ನರಳಿ ವಿಷ್ಣುವಾಗಿದ್ದ ಬುದ್ಧನಿಗೆ ಜಾಗತಿಕ ಮಟ್ಟದಲ್ಲಿ ದಾರ್ಶನಿಕ ವಿನ್ಯಾಸವೊಂದನ್ನ ಕಟ್ಟಿದ್ದು ಅಂಬೇಡ್ಕರ್ ಅವರ ತಳಸ್ಪರ್ಶಿಯವಾದಂತಹ ಅಧ್ಯಯನಗಳೇ ಆಗಿದೆ. ಅಂಬೇಡ್ಕರ್ ಅವರ ಪ್ರತಿಬಿಂಬವಾಗಿ ಬುದ್ಧ ನಿರೂಪಣೆಗೊಂಡಿದ್ದಾನೆಯೇ ಹೊರತು ಬುದ್ಧನಿಂದ ಅಂಬೇಡ್ಕರ್ ನಿರೂಪಿತಗೊಂಡಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಬೇಕಾಗಿದೆ.

ಮಲೆಮಹದೇಶ್ವರ, ಜುಂಜಪ್ಪ, ಮಂಟೇಸ್ವಾಮಿ, ಕೊರಗತನಿಯ, ಕಲ್ಲುರ್ಟಿ-ಕಲ್ಕುಡ, ಮುಂತಾದ ಜನಪದ ವೀರರು ಈ ಹೊತ್ತು ಮತ್ತೆಮತ್ತೆ ಚರ್ಚೆಗೆ ಬರುತ್ತಿರುವುದು ಸಾಮಾಜಿಕ ಸಮಾನತೆ ಮತ್ತು ಜಾತಿ ಅಸಮಾನತೆಯ ವಿಶ್ಲೇಷಣೆಗಳ ಮೂಲಕ. ಅಸಮಾನವಾದ ಸಮಾಜವನ್ನು ಮುರಿದು ಕಟ್ಟಲು ಮೇಲಿನ ವೀರರ ಕಥಾನಕ ಮತ್ತು ಆ ಕಥಾನಕಗಳ ಮೂಲಕ ಬದುಕು ಕಟ್ಟಿಕೊಂಡಿರುವ ಜನಪದರ ಆಚರಣಾ ವಿನ್ಯಾಸಗಳನ್ನು ಸಮುದಾಯವೊಂದರ ಪ್ರಜ್ಞೆಯಾಗಿ ರೂಪಿಸುತ್ತಿರುವ ಪ್ರಯತ್ನವನ್ನು ನಮ್ಮ ಸಂಸ್ಕೃತಿ ವಿಮರ್ಶೆ ಮಾಡುತ್ತಿದೆ. ಅದರ ಜೊತೆಗೆ ಸಂಸ್ಕೃತಿಯ ಈ ಕಥನ ವಿನ್ಯಾಸಗಳು ಸಾಹಿತ್ಯ ಪ್ರಕಾರವಾದ ಕಥೆ, ಕಾವ್ಯ, ನಾಟಕಗಳ ವಸ್ತುವಾಗಿಯೂ ನಿರೂಪಣೆಗೊಂಡಿರುವುದನ್ನು ಕಾಣಬಹುದಾಗಿದೆ. ಎಚ್ ಎಸ್ ಶಿವಪ್ರಕಾಶ್ ಮಂಟೇಸ್ವಾಮಿ ನಾಟಕ, ಚಂದ್ರಶೇಖರ ಕಂಬಾರ ನಾಟಕಗಳು ಈ ನೆಲೆಯಲ್ಲಿ ರಚನೆಗೊಂಡವು ಎನ್ನಬಹುದು.

"ಎಪಿಕ್ ಸ್ಟ್ರಕ್ಚರ್ ಎಂದರೇನು? ಸಂಸ್ಕೃತಿಯ ಎಲ್ಲಾ ಸ್ತರಗಳು ಕೂಡ ಬೇರೆಬೇರೆ ರೀತಿಗಳಲ್ಲಿ ಪ್ರಶ್ನೆಗೆ ಅಥವಾ ಜಿಜ್ಞಾಸೆಗೆ ಅಥವಾ ಚಿಂತನೆಗೆ ಗುರಿಯಾಗಿ ಓದುಗನಿಗೆ ಒಂದು ಅನುಭವ ಕೊಟ್ಟು ಅವರು ಚಿಂತಿಸುವ ಕ್ರಮದ ಕಡೆಗೆ ಕರೆದುಕೊಂಡು ಹೋಗೋದು ಈಗಾಗಲೆ ಕೆಲವು ಓದುಗಳನ್ನ ನಾವು ಪಡಕೊಂಡು, ಆ ಪಡೆದುಕೊಂಡಿರುವ ಓದನ್ನ ಒಂದು ರೀತಿಯಲ್ಲಿ ಪ್ರೊಜೆಕ್ಟ್ ಮಾಡ್ತಾ ಇದ್ದೀವಿ. ಪಂಪನ ಕಾವ್ಯ ಅದರ ನಿಜವಾದಂತ ರೀಡಿಂಗ್ ಪಬ್ಲಿಕ್ ಮತ್ತು ಪಂಪನ ಭಾಷೆ ಹೇಗೆ ಅದು ನಮ್ಮಲ್ಲಿ ಇಡೀ ನಮ್ಮ ಕನ್ನಡದ ಪರಂಪರೆಯಲ್ಲಿ ಬೇರೆಯದ್ದೆಯಾದ ಮುನ್ನಲೆಯನ್ನು ಅಥವಾ ವಿಕಾಸವನ್ನು ತೋರಿಸಿದೆ? ಅಂತ ಪ್ರಶ್ನೆಗಳನ್ನ ಕೇಳಿಕೊಳ್ಳಬೇಕಾಗಿದೆ. (ನಾಗಭೂಷಣ ಸ್ವಾಮಿ, 2018, ಪುಟ- ಕೆಂಡಸಂಪಿಗೆ)

"ನವೋತ್ತರ ಸಾಹಿತ್ಯ ಸಂದರ್ಭದಲ್ಲಿ ಹೊಸ ಸಾಮಾಜಿಕ ಒತ್ತಡಗಳ ಪರಿಣಾಮವಾಗಿ ಸಂಸ್ಕೃತಿ ವಿಮರ್ಶೆಯಂತಹ ಹೊಸ ಓದಿನ ಮಾದರಿಗಳು ಕಾಣಿಸಿಕೊಳ್ಳಲು ಕಾರಣವಾಯಿತು. 1973ರಲ್ಲಿ ಪೂರ್ಣಚಂದ್ರ ತೇಜಸ್ವಿಯವರು ತಮ್ಮ ಕಥಾಸಂಕಲನಕ್ಕೆ ಬರೆದ ಪ್ರಸ್ತಾವನೆ ರೂಪದ ಲೇಖನ 'ಹೊಸದಿಗಂತದೆಡೆಗೆ' ಎಂಬುದರಲ್ಲಿಯೇ ಇದರ ಸ್ಪಷ್ಟ ಕುರುಹುಗಳಿವೆ. ಹೊಸ ಸಾಹಿತ್ಯ ಮೀಮಾಸೆಯನ್ನು ಕಟ್ಟಿಕೊಳ್ಳುವ ಆಶಯಗಳಿವೆ. ನಂತರದಲ್ಲಿ ಹೆಣ್ಣುನೋಟದ ಓದು, ದಲಿತ ಮತ್ತು ಇತರೆ ದಮನಿತ ಸಮುದಾಯಗಳ ನೆಲೆಯ ಓದು ಮುಂಚೂಣಿಗೆ ಬರತೊಡಗಿದವು. ಆಧುನಿಕತೆಯನ್ನು ಮತ್ತು ಪಶ್ಚಿಮದ ಚಿಂತನೆಯ ಧಾರೆಗಳನ್ನು 'ಮಾರಕ'ವೆಂದು ತಿಳಿದವರಲ್ಲಿ 'ದೇಶಿ' ಚಿಂತನೆಯ ನೆಲೆಗಳನ್ನು ಶೋಧಿಸುವ ಮಾದರಿಗಳೂ ಆರಂಭಗೊಂಡವು" (ರಂಗನಾಥ ಕಂಟನಕುಂಟೆ, 2016, ಪುಟ- 31)

ನವ್ಯ ಸಾಹಿತ್ಯ ಸಂದರ್ಭದಲ್ಲಿ ಸಮಾಜಕ್ಕಿಂತಲೂ ವ್ಯಕ್ತಿ ಕೇಂದ್ರಿತ ನೆಲೆಯು ಗಟ್ಟಿಯಾಗುತ್ತಾ ಸಾಗಿತ್ತು. ವ್ಯಕ್ತಿ ಕೇಂದ್ರಿತ ಲೋಕದ ನಿರ್ಮಾಣವು ಸಮಾಜ ಸಂಸ್ಕೃತಿಗಳನ್ನು ಮರೆತು ಸಾಹಿತ್ಯ ಸೃಷ್ಟಿಗೆ ತೊಡಗಿತು. ಮುಂದೆ ಡಿ ಆರ್ ನಾಗರಾಜ, ಬಸವರಾಜ ಕಲ್ಗುಡಿ, ಕಿರಂ ನಾಗರಾಜರಂತವರು ಸಂಸ್ಕೃತಿ ಚಿಂತಕರು ಆಳವಾದ ಸಂಸ್ಕೃತಿಕೇಂದ್ರಿತ ವಿಮರ್ಶೆಯ ಕಡೆಗೆ ಹೊರಳಿದರು. ಡಿ ಆರ್ ನಾಗರಾಜ ಅವರ ಸಾಹಿತ್ಯ ಕಥನ, ಬಸವರಾಜ ಕಲ್ಗುಡಿಯವರ ಮೈಯೆಸೂರು ಮನವೆ ಮಾತು, ನಕ್ಷೆ ನಕ್ಷತ್ರ, ಕಿರಂ ಅವರ ಹಲವು ಉಪನ್ಯಾಸಗಳು ಸಂಸ್ಕೃತಿಯ ಪ್ರಶ್ನೆಗಳನ್ನು ಮುನ್ನೆಲೆಗೆ ತಂದರು. ಸಾಹಿತ್ಯ, ರಾಜಕೀಯ, ಸಮಾಜ, ಜನಸಮುದಾಯ, ಭಾಷೆ, ವಾಗ್ವಾದ ಎಲ್ಲ ವಿಚಾರಧಾರೆಗಳಲ್ಲಿಯೂ ಸಂಸ್ಕೃತಿಯ ಪ್ರಶ್ನೆಗಳು ಡಾಳವಾಗಿ ಕಾಣಿಸಿಕೊಂಡವು. ಮುಂದೆ ದಾಸಸಾಹಿತ್ಯ, ವಚನಸಾಹಿತ್ಯ, ತತ್ವಪದಗಳು, ಜಾನಪದೀಯ ಅಧ್ಯಯನಗಳು ಸಂಸ್ಕೃತಿ ಅಧ್ಯಯನದ ಭಾಗವಾಗುತ್ತಾ ಸಾಗಿತು. ಕುವೆಂಪು ಆದಿಯಾಗಿ ಇಂದಿನ ದೇವನೂರು ಮಹಾದೇವ ಅವರ ವರೆಗಿನ ಸಾಹಿತ್ಯ ಪಠ್ಯ ಮತ್ತು ಕೃತಿಕಾರರು ತಮ್ಮ ಸಾಹಿತ್ಯಕ ಸೃಷ್ಟಿಯ ಮೂಲಕ ಸಂಸ್ಕೃತಿ ಚಿಂತನೆಗೆ, ಸಂಸ್ಕೃತಿಯ ಪ್ರಶ್ನೆಗೆ ಹಾಗೂ ಸಂಸ್ಕೃತಿ ವಿಮರ್ಶೆಗೆ ಆಕರ ಮತ್ತು ಪರಿಕರಗಳಾಗಿ ಪರಿಗಣಿಸಲ್ಪಟ್ಟಿದ್ದಾರೆ.

ಸಂಸ್ಕೃತಿ ವಿಮರ್ಶೆಯನ್ನು ಕ್ಲಾಸಿಕ್ ಪಠ್ಯಗಳ ಜೊತೆಯಲ್ಲಿ ನಿರ್ವಹಿಸುವಾಗ ಎಚ್ಚರದಿಂದಿರಬೇಕು ಎಂಬ ಅಂಶವನ್ನು ಕೆ ವಿ ನಾರಾಯಣ ಅವರ ಮಾತಿನ ಹಿನ್ನೆಲೆಯಲ್ಲಿ ವಿಮರ್ಶಕರಾದ ರಂಗನಾಥ ಕಂಟನಕುಂಟೆ ಈ ರೀತಿಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ "ಸಂಸ್ಕೃತಿ ವಿಮರ್ಶೆಯಲ್ಲಿ ಕ್ಲಾಸಿಕ್ ಪಠ್ಯಗಳನ್ನು ಅರಿಯುವಾಗ ಕೊಂಚ ಎಚ್ಚರ ತಪ್ಪಿದರೂ ಅದು ಪರಂಪರೆಯ ಆರಾಧನೆಯಲ್ಲಿ ಮುಳುಗಿ ಬಿಡುವ ಸಾಧ್ಯತೆಯಿದೆ. ಮತ್ತು ಅಂತಹ ಓದಿನಿಂದ ವರ್ತಮಾನದ ಬದುಕಿಗೆ ಯಾವ ಪ್ರಯೋಜನವೂ ದಕ್ಕುವುದಿಲ್ಲ. ಓದಿನಿಂದ ನಮಗೆ ಬೇಕಾದ ತಾತ್ವಿಕತೆ ಹುಟ್ಟಿಕೊಳ್ಳುವಂತಿರಬೇಕು. ಹಾಗಾದಾಗ ಮಾತ್ರ ಸಾಂಸ್ಕೃತಿಕ ವಿಮರ್ಶೆಗೆ ಜೀವಬರುವುದು. ಇಲ್ಲವಾದಲ್ಲಿ ಸಾಹಿತ್ಯದ ಓದು ನೀರಸವಾಗಿಬಿಡುವ, ಪರಂಪರೆಯ ಸ್ತುತಿಯಾಗಿಬಿಡುವ, ಅದನ್ನು ಪವಿತ್ರೀಕರಿಸುವ ಸಾಧ್ಯತೆಯಿರುತ್ತದೆ. ಯಾವತ್ತೂ ಕೂಡ ಓದಿನ

ಮೂಲಕ, ಓದುಗರು ತಮ್ಮನ್ನು ಮತ್ತು ವರ್ತಮಾನದ ಜನರ ಬದುಕನ್ನು, ಸಮಾಜದ ರಚನೆಯನ್ನು, ಅಲ್ಲಿನ ಸಾಂಸ್ಕೃತಿಕ ವಿನ್ಯಾಸಗಳನ್ನು, ಜನರ ದುಗುಡಗಳನ್ನು ಅರಿಯುವುದೇ ಆಗಿರುತ್ತದೆ. ಅಂತಹ ದುಗುಡಗಳನ್ನು ಅರಿಯುವ ತುಡಿತ ಮತ್ತು ಕಾಳಜಿಗಳನ್ನು ಓದುಗರು ಹೊಂದಬೇಕಾದ ಅಗತ್ಯವಿದೆ" (ರಂಗನಾಥ ಕಂಟನಕುಂಟೆ, 2016, ಪುಟ– 33)

ಇತ್ತೀಚೆಗೆ ಬಾಲಗಂಗಾಧರ್ ಸ್ಕೂಲ್ ಸಂಸ್ಕೃತಿ ಚಿಂತನಾಧಾರೆಯನ್ನು ವಿಜ್ಞಾನದ ತಳಹದಿಯಲ್ಲಿ ಪ್ರಶ್ನಿಸುವ ಮೂಲಕ ಕನ್ನಡಕ್ಕೆ ಬಲಪಂಥೀಯವಾದರೂ ಬಲಪಂಥೀಯವೆಂದೆನ್ನಿಸದ ರೀತಿಯಲ್ಲಿ ಯೋಜನಾಬದ್ಧ ವಿಚಾರಧಾರೆಗಳನ್ನು ಮುಂದಿಡುತ್ತಾ ಸಾಗಿದೆ. ಸಂಸ್ಕೃತಿ ವಿಮರ್ಶೆಯು ಬಹುವಾಗಿ ಪ್ರಶ್ನಿಸಬೇಕಾದ ಸಂಸ್ಕೃತಿ ಸಂಸ್ಕೃತಿಗಳ ಅನುಸಂಧಾನಾತ್ಮ ಆಯಾಮವನ್ನೇ ನಿರಾಕರಿಸುವ ಕಾರ್ಯವನ್ನು ಮಾಡುತ್ತಿದೆ. "ಸಂಸ್ಕೃತಿಗಳ ನಡುವಿನ ವ್ಯತ್ಯಾಸವನ್ನೂ ನಾವು ಹೀಗೇ ತಿಳಿಯಬೇಕು ಎಂದಾದಲ್ಲಿ, ಈ ಸಂಸ್ಕೃತಿಯಲ್ಲಿ ಏನಿಲ್ಲ ಎಂದು ಮುಂತಾಗಿ ನೋಡಿದರೆ ಪ್ರಯೋಜನವಿಲ್ಲ. ಅದರ ಬದಲು, ಸಂಸ್ಕೃತಿಗಳನ್ನು ಲೋಕಜ್ಞಾನದ ಅಥವಾ ಕಲಿಕೆಯ ಕ್ರಮವಾಗಿ ನೋಡಬೇಕು" (ಅಶ್ವಿನ್ ಕುಮಾರ್ ಎ ಪಿ, 2018, ಪುಟ–37)

"ಯಾವುದೆ ಕೃತಿ ಅಥವಾ ಕೃತಿ ಸಮೂಹವನ್ನು ಓದುಗ ತನ್ನ ಸಂಸ್ಕೃತಿಯ ಹೊರಗೆ ನಿಂತು ನೋಡದೆ ತನ್ನ ಸಂಸ್ಕೃತಿಯ ನೆಲೆಯಲ್ಲೇ, ಭಾಷಾ, ಕಾವ್ಯ ಪರಂಪರೆಯ ಹಿನ್ನೆಲೆಯಲ್ಲೇ ನೋಡಬೇಕು ಎಂಬ ಅಪೇಕ್ಷೆ ಮತ್ತು ಆಚಾರ ಕಿ.ರಂ ಅವರದ್ದು. ಈ ರೀತಿ ಸ್ಥಳಿಯ ದೃಷ್ಟಾಂತಗಳ ಮೂಲಕ ಸ್ವಭಾಷಿಕ ಸಂಸ್ಕೃತಿಯ ನೆಲೆಯಲ್ಲಿ ನಿಂತು ಕಾವ್ಯವನ್ನು ನೋಡುವ ಕ್ರಮವು ಒಂದು ಮುಖ್ಯ ಕ್ರಮವಾಗಿದೆ. (ರಾಮಲಿಂಗಪ್ಪ ಟಿ ಬೇಗೂರು, 2017, ಪುಟ–258) ಈ ಮಾತು ಕಿರಂ ಸಂಸ್ಕೃತಿಯೊಂದರ ಎಳೆಯನ್ನು ಬಳಸಿ ರೂಪಿಸಿದ ಸ್ಥಳೀಯ ವಿಮರ್ಶೆಯೊಂದರ ಮಾದರಿಯನ್ನು ಗುರುತಿಸುವಂತೆ ಮಾಡುತ್ತದೆ.

ಭಾಷೆಯಲ್ಲಿ ಸಂಭವಿಸುವ ಪ್ರತಿಯೊಂದು ಕೃತಿಯನ್ನೂ ಸಾಂಸ್ಕೃತಿಕ ಆಕೃತಿಯೆಂದೇ ಕಿ. ರಂ. ನಾಗರಾಜ ಅವರು ಭಾವಿಸುತ್ತಿದ್ದರು. ಆ ಮೂಲಕ ಅವರು ಒಂದು ವಿಮರ್ಶೆಯನ್ನು ನಿರ್ವಹಿಸುತ್ತಿದ್ದ ಬಗೆಯು ಸಾಂಸ್ಕೃತಿಕವಾದ ಸಂಸ್ಕೃತಿ ವಿಮರ್ಶೆಯ ಚಹರೆಗಳೇ ಆಗಿದೆ. ಮಂಟೇಸ್ವಾಮಿ ಕುಲಸ್ಥಾನಿಯದ ನೆಲೆಗಳು ಎಂಬ ಲೇಖನದಲ್ಲಿ ಕಿ.ರಂ ನಾಗರಾಜ ಅವರು ಮಂಟೇಸ್ವಾಮಿಯ ಪವಾಡದ ಕುರಿತು ಅಭಿಪ್ರಾಯವನ್ನು ಮುಂದಿಡುವಾಗ ಆ ಪವಾಡಗಳು ವಿಜ್ಞಾನ ಮತ್ತು ಸಂಸ್ಕೃತಿಗೆ ಮುಖಾಮುಖಿಯಾಗಿಸಿ ಚಿತ್ರಿಸಿ ಮಾತನಾಡಿದ್ದಾರೆ. ವಿಚಾರವಾದಿಗಳು ಸಂಸ್ಕೃತಿಯ ಜಾಡನ್ನು ವಿಜ್ಞಾನದ ತಳಹದಿಯಲ್ಲಿ ನಿಂತು ಪರಾಮರ್ಶಿಸುವುದು ಸರಿಯಲ್ಲ ಎಂಬುದು ಅವರ ವಾದ. ವಿಚಾರವಾದಿಗಳು ವಿಜ್ಞಾನ ತಂತ್ರಜ್ಞಾನ ಸೃಷ್ಟಿಸುವ ಪವಾಡಗಳನ್ನು ಒಪ್ಪಿಕೊಳ್ಳುತ್ತಾರೆ. ಆದರೆ ಸಂಸ್ಕೃತಿಯ ಒಳಗಿರುವ ನಂಬಿಕೆ, ಆಚರಣೆ, ವಿನ್ಯಾಸದಲ್ಲಿರುವ ಸೆಕ್ಯಲರಿಸಂನ ತಾತ್ವಿಕತೆಯನ್ನು ಒಪ್ಪಿಕೊಳ್ಳುವುದಿಲ್ಲ. ಇದು ಆತಂಕದ ವಿಷಯ ಎಂದು ಅಭಿಪ್ರಾಯ ಪಡುತ್ತಾರೆ. ಅವರ ಪ್ರಕಾರ "ಮಂಟೇಸ್ವಾಮಿ ಕಾವ್ಯದಲ್ಲಿ ಬರುವ ಈ ಪವಾಡಗಳಿವೆಯಲ್ಲ, ಅವು ಅತಿಮಾನುಷವಲ್ಲ. ಮೇಲುನೋಟಕ್ಕೆ ಅತಿಮಾನುಷವೆಂದು ತೋರುತ್ತವೆ. ಆದರೆ ಅದರ ಒಳಹೂರಣವನ್ನು ಗಮನಿಸಿ; ಇಲ್ಲಿ ನಿಜವಾಗಿಯೂ ಸಾಮುದಾಯಿಕ ವಾಸ್ತವಿಕತೆಯೇ ಈ ಪವಾಡಗಳ ಅರ್ಥಸೂಚಿಯಾಗಿದೆ. ಪವಾಡಗಳ ಬಗ್ಗೆ ವಿಚಾರವಾದಿಗಳಾಗಿ ನಾವು ಆತಂಕಪಡಬಾರದು... ಪವಾಡದಲ್ಲಿರುವುದು ಒಂದು ಹ್ಯೂಮನ್ ಎಲಿಮೆಂಟ್. (ವೆಂಕಟೇಶ್ ಇಂದ್ವಾಡಿ (ಸಂ), 2005, ಪುಟ–45) ಆದರೆ ನಮ್ಮ ವಿಚಾರವಾದಿಗಳು ಎಲ್ಲವನ್ನು ವೈಜ್ಞಾನಿಕ ತಳಹದಿಯಲ್ಲಿ ಗಮನಿಸುತ್ತಾರೆಯೇ ವಿನಃ ಸಾಂಸ್ಕೃತಿ ಆಯಾಮದಲ್ಲಿ ಗಮನಿಸುವುದಿಲ್ಲ ಎಂಬ ಚಿಂತನೆಯ ಜೊತೆಗೆ ಸಂಸ್ಕೃತಿ ಬಗ್ಗೆ ವಿಮರ್ಶಿಸುವಾಗ ತಾನು ವಿಚಾರವಾದಿಯಾಗಿದ್ದರೂ ಸಹ ನ್ನ ಸ್ಪಷ್ಟತೆ ಮತ್ತು ಆದ್ಯತೆ ಸಂಸ್ಕೃತಿ ವಿಮರ್ಶೆಯೇ ವಿನಃ, ವಿಚಾರವಾದವಲ್ಲ ಎಂಬುದನ್ನು ಕಿ.ರಂ ನಾಗರಾಜ ಅವರ ಈ ಅಭಿಪ್ರಾಯದಲ್ಲಿ ಗಮನಿಸಬಹುದು. ಜೊತೆಗೆ "ಇವು ಅರೆವಿಜ್ಞಾನಿಗಳಿಂದ ಅಥವಾ ಉದರ ಪೋಷಣೆಯ ವಿಜ್ಞಾನಿಗಳಿಂದ ಬಂದಿರೋ ಕೆಲವು ಕಲ್ಪನೆಗಳು ಇವು. ಒಂದು ಕೆಟ್ಟ ಮಾರ್ಕ್ಸ್‌ವಾದಿ ಆಲೋಚನೆ ಹುಟ್ಟಿಕೊಂಡಿರೋ ಹಿನ್ನೆಲೇನೆ ಇದೆಲ್ಲಕ್ಕೂ ಕಾರಣವಾಗಿರೋದು". (ವೆಂಕಟೇಶ್ ಇಂದ್ವಾಡಿ (ಸಂ), 2005, ಪುಟ–48) ಎಂಬ ಅಭಿಪ್ರಾಯದೊಂದಿಗೆ ಇಡೀ ವೈಚಾರಿಕ ಮತ್ತು ವೈಜ್ಞಾನಿಕತೆ ಮಾತ್ರ ಸೆಕ್ಯುಲರಿಸಂನ ಭಾಗವಲ್ಲ ಬದಲಾಗಿ ಸಂಸ್ಕೃತಿಯೂ ಸೆಕ್ಯುಲರಿಸಂನ ಭಾಗ ಎಂದು ಕಿ.ರಂ ನಾಗರಾಜ ಅವರು ಪ್ರತಿಪಾದಿಸಿದ್ದಾರೆ.

ಸಮಾಜ ವಿಜ್ಞಾನ ಮತ್ತು ಸಾಹಿತ್ಯದ ನಡುವೆ ಸಂಸ್ಕೃತಿ ಧಾತುವನ್ನು ಗುರುತಿಸುವ ಸಂದರ್ಭದಲ್ಲಿ ಕಿ.ರಂ ನಾಗರಾಜ ಅವರ ಅಭಿಪ್ರಾಯ ವಿಶಿಷ್ಟವಾದ ನೆಲೆಗಟ್ಟನ್ನು ಮುಂದಿಡುತ್ತದೆ. ಸಮಾಜ ವಿಜ್ಞಾನಿಗಳು ಸಾಹಿತ್ಯದಿಂದ ಪರಿಭಾವಿಸಲ್ಪಡುವ ಸಂಸ್ಕೃತಿಯ ಆಯಾಮವನ್ನು ಒಪ್ಪಿಕೊಳ್ಳುವುದಿಲ್ಲ. ಬದಲಾಗಿ ಸಾಹಿತ್ಯವನ್ನು ಕಲ್ಪಿತ ನೆಲೆಯಲ್ಲಿರುವ ಅಮೂರ್ತ ವಿನ್ಯಾಸವೆಂದು ಭಾವಿಸುತ್ತಾರೆ. ಆದರೆ ನಿಜವಾಗಿಯೂ ಸಾಹಿತ್ಯದ ಮೂಲಕ ಸಮಾಜವನ್ನು ಸಮಾಜದ ಮೂಲಕ ಸಾಹಿತ್ಯವನ್ನು ವಿವೇಚಿಸುವ ಕಾರ್ಯಗಳು ಆಗಬೇಕಾಗಿತ್ತು. ಆದರೆ ಈಓ ಬಗೆಯ ನಿರೂಪಣೆಗಳು ಇನ್ನೂ ಸಾಧಿತವಾಗಿಲ್ಲ ಎಂಬ ನೆಲೆಯನ್ನು ಕುಮಾರ ವ್ಯಾಸ ಮತ್ತು ಕರ್ನಾಟಕ ಸಂಸ್ಕೃತಿ ಎಂಬ ಲೇಖನದಲ್ಲಿ ಕಾಣಬಹುದು. ಲಿಟರೇಚರ್ ಕ್ರಿಟಿಸಿಸಂ ಎಂಬುದು ಸಮಾಜವನ್ನು ಒಳಗೊಂಡತೆ ನಡೆಯುವ ಕ್ರಿಯಾಭಿವ್ಯಕ್ತಿ. ಸಾಹಿತ್ಯಕ ಸಿದ್ಧಾಂತಗಳು ಕೆಲವು ಬಾರಿ ಸಮಾಜಶಾಸ್ತ್ರೀಯ ಸಿದ್ಧಾಂತಕ್ಕಿಂತಲೂ ಪ್ರಕರವಾದ ಪರಿಣಾಮವನ್ನು ಬೀರಿರುವುದನ್ನು ಗತಿಕಾಲದಿಂದಲೂ ಚಾರಿತ್ರಿಕವಾಗಿ ಗಮನಿಸಿದರೆ ಅರ್ಥವಾಗುತ್ತದೆ. ಆಗಂತ ಸಾಹಿತ್ಯವೇ ಶ್ರೇಷ್ಠ ಎಂಬ ಅಭಿಪ್ರಾಯಕ್ಕೂ ನಾವುಗಳು ಬರಬೇಕಾಗಿಲ್ಲ. ಆದರೆ ಪಾಶ್ಚಮಾತ್ಯ ವಿಮರ್ಶಾ ಸಿದ್ಧಾಂತಗಳು ಸಮಾಜಶಾಸ್ತ್ರೀಯ ವಿಮರ್ಶೆಯಿಂದಲೇ ಹುಟ್ಟಿಕೊಂಡಿದ್ದು. ಈ ಹೊತ್ತು ಅವುಗಳು ಉತ್ಪಾದನಾ ಮಾರುಕಟ್ಟೆಯನ್ನು ನಿರ್ಧರಿಸಿ ನಿರ್ಮಾಣಗೊಳ್ಳುತ್ತಿರುವ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಪೋಸ್ಟ್ ಸ್ಟ್ರಕ್ಚರಲಿಸಂ, ಫ್ರೆಂಚ್ ಎಕ್ಸ್ಟ್ರಿಮಿಸಂಗಳು ಜಾಗತಿಕ ಮಾರುಕಟ್ಟೆಯನ್ನು ಗಮನಿಸಿಯೇ, ಸರ್ವಾಧಿಕಾರತ್ವ ರಾಜಕೀಯ ವಿನ್ಯಾಸವನ್ನು ಗಮನಿಸಿಯೇ ಬದಲಾಗುತ್ತಿದೆ. ಫ್ಯಾಸಿಸಂನ ನಿರೂಪಣೆಗಳು ಈ ಸಿದ್ಧಾಂತಗಳನ್ನು ಹತೋಟಿಯಲ್ಲಿಡುವ ತಮಗೆ ಬೇಕಾದಂತೆ ವ್ಯಾಪಕವಾಗಿ ಹಬ್ಬಿಸುವ ಹುನ್ನಾರಗಳು ನಮ್ಮ ಮುಂದಿದೆ. ಈ ಹೊತ್ತು ನಾವು ಮರಳಬೇಕಾದದ್ದು ಸಂಸ್ಕೃತಿಯನ್ನು ಆವಾಯಿಸಿಕೊಂಡಿರುವ ದಟ್ಟವಾದ, ಜೀವಂತವಾದ ವಿಮರ್ಶೆಯ ಮಾದರಿಯ ಕಡೆಗೆ ಎಂಬುದನ್ನು ಈ ಪ್ರತಿಕ್ರಿಯೆಯ ಹಿನ್ನೆಲೆಯಿಂದ ಗಮನಿಸಬಹುದು.

**ಪರಾಮರ್ಶನ ಗ್ರಂಥಗಳು**

1. ಅಶ್ವಿನ್ ಕುಮಾರ್ ಎ ಪಿ, 2018, ಮಿಶೆಲ್ ಫುಕೋ, ಪರಸ್ಪರ ಪ್ರಕಾಶನ, ಬೆಂಗಳೂರು
2. ಕೇಶವಶರ್ಮ ಕೆ, 2012, ನೀಲನಕ್ಷೆ, ಶಿವಮೊಗ್ಗ: ಗೀತಾಂಜಲಿ ಪುಸ್ತಕ ಪ್ರಕಾಶನ
3. ನಟರಾಜ್ ಹುಳಿಯಾರ್, 2012, ತರೆದ ಪಠ್ಯ, ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.
4. ಪ್ರದೀಪ್ ಮಾಲ್ಗುಡಿ(ಸಂ) 2011, ನಿಜದ ನಾಡೋಜ,

ಬೆಂಗಳೂರು: ಸಂಸ ಪ್ರಕಾಶನ
5. ರಾಜೇಂದ್ರ ಚೆನ್ನಿ, 2004, ನಡುಹಗಲಿನಲ್ಲಿ ಕಂದೀಲು, ಲೋಹಿಯಾ ಪ್ರಕಾಶನ: ಬಳ್ಳಾರಿ.
6. ರಂಗನಾಥ ಕಂಟನಕುಂಟೆ (ಡಾ), 2016, ಓದಿನ ಜಾಡು, ಗದಗ:ಲಡಾಯಿ ಪ್ರಕಾಶನ
7. ವೆಂಕಟೇಶ್ ಇಂದ್ವಾಡಿ (ಡಾ), 2004, ಮಂಟೇಸ್ವಾಮಿ ಕಾವ್ಯ: ಸಾಂಸ್ಕೃತಿ ಮುಖಾಮುಖಿ, ಹಂಪಿ: ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ
8. ಸಿದ್ಧಲಿಂಗಯ್ಯ (ಸಂ), 2012, ಸಂಪುಟ–4, ಸಂಚಿಕೆ–02, ಅಕ್ಟೋಬರ್– ಡಿಸೆಂಬರ್, ಪುಸ್ತಕ ಲೋಕ, ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.
9. ಮೈಸೂರಿನ ರಾಮು ಅವರ ಮನೆಯಲ್ಲಿ ಓ.ಎಲ್ ನಾಗಭೂಷಣ ಸ್ವಾಮಿ ಅವರು 2010ರ ಜುಲೈನಲ್ಲಿ ನಡೆಸಿದ ಸಂದರ್ಶನ. ಈ ಸಂದರ್ಶನದ ಬರಹ ರೂಪವನ್ನು ಕೆಂಡಸಂಪಿಗೆ ಆನ್‌ಲೈನ್ ಸಾಹಿತ್ಯ ಪತ್ರಿಕೆಯು ಅಕ್ಟೋಬರ್ 29, 2018ರಂದು ತನ್ನ ವೆಬ್‌ಪುಟದಲ್ಲಿ ಪ್ರಕಟಿಸಿದೆ.
10. ಎಂ ಎಸ್ ಆಶಾದೇವಿಯವರು ಕಿರಂ ಜೊತೆಗೆ ನಡೆಸಿದ ಮಾತುಕತೆಯು ‘ಭಾಷಾ ಶರೀರದಾಚೆಗೂ ನನಗೆ ಕಾವ್ಯದ ಅಸ್ತಿತ್ವವಿದೆ’ ಎಂಬ ಶಿರ್ಷಿಕೆಯಲ್ಲಿ ಸಂದರ್ಶನ ರೂಪ ಪಡೆದು ಮಯೂರ ಮಾಸ ಪತ್ರಿಕೆಯ ಜುಲೈ 2006ರ ಸಂಚಿಕೆಯಲ್ಲಿ ಪ್ರಕಟವಾಗಿದೆ. ಜೊತೆಗೆ ಪ್ರದೀಪ್ ಮಾಲ್ಗುಡಿ ಅವರ ನಿಜದ ನಾಡೋಜ ಮತ್ತು ನಟರಾಜ ಹುಳಿಯಾರ್ ಅವರ ತೆರದ ಪಠ್ಯ ಕೃತಿಯಲ್ಲಿಯೂ ಈ ಸಂದರ್ಶನವನ್ನು ಕಾಣಬಹುದು.